ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

# ಶೀಗಿ ಚಿತ್ರಕಲೆ

ಡಾ. ಯಾದಪ್ಪ ಬ. ಪರದೇಶಿ



# ಶೀಗಿಯ ಚಿತ್ರಕಲೆ

ಪ್ರಧಾನ ಸಂಪಾದಕರು
ಪೀಟರ್ ಎ. ಲೂಯಿಸ್

ಲೇಖಕರು
ಡಾ.ಯಾದಪ್ಪ ಬ. ಪರದೇಶಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

**SHEEGIYA CHITRAKALE**
*By* : Dr. Yadappa B. Paradeshi

*Published by*
B.T. Munirajayya, Registrar
Karnataka Lalithakala Academy
Kannada Bhavana, J.C.Road
BANGALORE-560002

First Impression : 2004

Pages : XII + 48 Price Rs : 40-00

ಬೆಲೆ ರೂ. : ೪೦-೦೦

ಪ್ರಥಮ ಮುದ್ರಣ : ೨೦೦೪

© ಲೇಖಕರದು

ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು
ಆಯಾ ಲೇಖಕರಿಗೆ ಸಂಬಂಧಿಸಿದ್ದು

*ಪ್ರಧಾನ ಸಂಪಾದಕರು*
ಶ್ರೀ ಪೀಟರ್ ಎ. ಲೂಯಿಸ್

*ಸಂಪಾದಕರು*
ಡಾ.ಎಸ್.ಸಿ.ಪಾಟೀಲ

*ಪ್ರಕಟಣಾ ಸಮಿತಿ ಸದಸ್ಯರು*
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ

*ಪ್ರಕಾಶಕರು*
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

*ಸಮನ್ವಯಕಾರ* : ಶ್ರೀ ಪ.ಸ.ಕುಮಾರ

*ಮುಖಪುಟ* : ಶ್ರೀ ಸುಧಾಕರ ದರ್ಬೆ

*ಅಕ್ಷರ ಜೋಡಣೆ* : ಯಾಜಿ ಗ್ರಾಫಿಕ್ಸ್, ಹೊಸಪೇಟೆ

ಮುದ್ರಣ : ಶ್ರೀ ಮಾರುತಿ ಪ್ರಿಂಟರ್ಸ್, ಸುಧಾಮನಗರ, ಬೆಂಗಳೂರು-೨೭

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

**ಯಂಗ್ ಸ್ಟ್ರೋಕ್ಸ್:** ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

**ಮನೆಗೊಂದು ಕಲಾಕೃತಿ :** ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

**ನಿಮ್ಮೊಂದಿಗೆ ನಾವು :** ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

**ಜನಪದ ಶೃತಿ-ಆಧುನಿಕ ಕೃತಿ :** ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್ :** ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ **ವಾರ್ಷಿಕ** ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ
೨. ಶೀಗಿ ಚಿತ್ರಕಲೆ
೩. ಕಸೂತಿ ಚಿತ್ರಕಲೆ
೪. ಹಚ್ಚೆ ಚಿತ್ರಕಲೆ
೫. ಬೆಳದಿಂಗಳ ಚಿತ್ರಕಲೆ
೬. ಚಿತ್ತಾರಗೊಂಬೆ ಚಿತ್ರಕಲೆ
೭. ನಾಗಾರಾಧನೆ ಮತ್ತು ಚಿತ್ರಕಲೆ
೮. ಯಕ್ಷಗಾನ ಮತ್ತು ಚಿತ್ರಕಲೆ
೯. ಬಿದರಿ ಚಿತ್ರಕ
೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

# ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೊಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು. ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

ಬಸವ ಜಯಂತಿ — ಡಾ. ಎಸ್. ಸಿ. ಪಾಟೀಲ

೨೦೦೪ — ಸಂಪಾದಕರು

ಜಗತ್ತಿನ ಯಾವುದೇ ಸಂಸ್ಕೃತಿಯ ಮೂಲ ಬೇರುಗಳನ್ನು ಜನಪದ ಸಂಸ್ಕೃತಿಯಿಂದ ಗುರುತಿಸಲಾಗುತ್ತದೆ. ಈ ಅರ್ಥದಲ್ಲಿ ಜನಪದವು ಮಾನವ ಸಂಸ್ಕೃತಿಯ ಮೊದಲ ಪುಟವೆನ್ನಬಹುದು.[೧] ಈ ಸಂಸ್ಕೃತಿಯಲ್ಲಿ ಅವರ ಆಚಾರ, ವಿಚಾರ, ರೀತಿ, ನೀತಿ, ಧರ್ಮ, ದೇವರು, ಆಚರಣೆ, ವಿಧಿಕ್ರಿಯೆಗಳು ಮಾತ್ರವಲ್ಲದೇ ಅವುಗಳನ್ನು ಅನುಸರಿಸಿಕೊಂಡು ಬೆಳೆದು ಬಂದ ಹಲವಾರು ಕಲೆಗಳೂ ಇವೆ.

ಅಗೋಚರ ಕಾಲ ಒಂದರಲ್ಲಿ ರೂಪುಗೊಂಡಿರಬಹುದಾದ ಈ ಜನಪದ ಕಲೆಗಳು ಆಯಾ ಸಂಸ್ಕೃತಿಯ ಜನರ ಬದುಕಿನ ಆತ್ಮವಾಗಿ, ಜೀವವಾಗಿ, ಜೀವಂತ ಅಸ್ತಿತ್ವವನ್ನು ಪಡೆದಿವೆಯಲ್ಲದೇ ಅವು ಜನಪದರ ಬದುಕಿನೊಡನೆ ಅರ್ಥಪೂರ್ಣ ಸಂಬಂಧವನ್ನು ಹೊಂದಿವೆ.

ಜನಪದ ಕಲೆಗಳನ್ನು ಅವುಗಳ ಸ್ವರೂಪ, ಸಂದರ್ಭ, ಆಚರಣೆ ವಿಧಾನ ಮುಂತಾದ ಹಲವಾರು ಅಂಶಗಳ ಹಿನ್ನೆಲೆಯಲ್ಲಿ ಧರ್ಮಮೂಲ, ವೃತ್ತಿಮೂಲ ಮತ್ತು ಸೌಂದರ್ಯ ಮೂಲ ಜನಪದ ಕಲೆಗಳೆಂದು ವಿಂಗಡಿಸಲಾಗಿದೆ.[೨] ಇವುಗಳಲ್ಲಿ ಹಾಡು, ಕುಣಿತ, ಅಭಿನಯ, ವಾದ್ಯ ನುಡಿಸುವುದು ಚಿತ್ರ ಬರೆಯುವುದು, ಶಿಲ್ಪ ರಚಿಸುವುದು ಮುಂತಾದ ನೂರಾರು ಕಲೆಗಳಿದ್ದು ಅವುಗಳಲ್ಲಿ ಚಿತ್ರಕಲೆಯು ಮಹತ್ವದ್ದಾಗಿದೆ.

ಜನಪದ ಚಿತ್ರಕಲಾ ಪರಂಪರೆಯ ವ್ಯಾಪ್ತಿ ವಿಶಾಲವಾಗಿದ್ದು ಅದರಲ್ಲಿ ಹಲವಾರು ಕಲಾಪ್ರಕಾರಗಳಿವೆ. ಗೋಡೆಯ ಮೇಲೆ ಚಿತ್ರಿಸುವುದು, ಬಟ್ಟೆಯ ಮೇಲೆ ಚಿತ್ರಿಸುವುದು, ಉಪಯೋಗಿ ವಸ್ತುಗಳ ಮೇಲೆ ಚಿತ್ರಿಸುವುದು ಹೀಗೆ ಹತ್ತು ಹಲವು ಮಾಧ್ಯಮ ಮತ್ತು ಪರಿಕರಗಳು ಇದ್ದು, ಬೇರೆಬೇರೆ ಸಂದರ್ಭ ಆಚರಣೆಗಳ ಹಿನ್ನೆಲೆಯಲ್ಲಿ ಜನಪದರು ಚಿತ್ರ ರಚನೆ ಮಾಡುತ್ತಾರೆ.

ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಹೆಚ್ಚಿನ ಜನಪದ ಆಚರಣೆಗಳಲ್ಲಿ ಚಿತ್ರರಚನೆ ಮಾಡಲಾಗುತ್ತದೆ. ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಹಸೆ ಚಿತ್ರ ಬರೆಯುವುದು,

ನಾಗಾರಾಧನೆಯಲ್ಲಿ ನಾಗಮಂಡಲ ಬರೆಯುವುದು, ಬಯಲುಸೀಮೆಯಲ್ಲಿ ಬೆಳದಿಂಗಳ ಚಿತ್ರ ಬರೆಯುವುದು, ಉತ್ತರ ಕರ್ನಾಟಕ ಭಾಗದಲ್ಲಿ ದೀಪಾವಳಿ ಮುಂತಾದ ಸಂದರ್ಭಗಳಲ್ಲಿ ಚಿತ್ರಬರೆದು ಮನೆಗೋಡೆಗಳನ್ನು ಅಲಂಕರಿಸುವುದು, ಶೀಗಿ ಹುಣ್ಣಿಮೆಯಲ್ಲಿ ವೈವಿಧ್ಯ ಚಿತ್ರ ರಚಿಸುವುದು ಹೀಗೆ ಹತ್ತು ಹಲವು ವಿಧಾನಗಳಿವೆ. ಪ್ರಾದೇಶಿಕತೆ ಮತ್ತು ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಈ ಚಿತ್ರ ಪ್ರಕಾರಗಳು ಆಯಾ ಪ್ರದೇಶದ ಜನರ ಆಶೋತ್ತರಗಳನ್ನು ಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಜನಪದ ಚಿತ್ರರಚನೆಯ ಪ್ರಕಾರಗಳಲ್ಲಿ ಒಂದಾದ 'ಶೀಗಿ ಚಿತ್ರಕಲೆ' ಬಗ್ಗೆ ಸ್ಥೂಲವಾಗಿ ಗಮನಿಸಬಹುದಾಗಿದೆ.

'ಶೀಗಿ ಚಿತ್ರಕಲೆ' ಎಂದರೆ ಶೀಗಿಹುಣ್ಣಿಮೆ ಹಬ್ಬದ ಸಂದರ್ಭದಲ್ಲಿ ಚಿತ್ರ ಬರೆಯುವದಾಗಿದೆ. 'ಶೀಗಿ' ಸಂಸ್ಕೃತದ 'ಶಿಖಾ' ಶಬ್ದದ ತದ್ಭವವಾಗಿದ್ದು ಅದು ಶಿಖರ, ಶಿಖ, ಶೀಗಿ ಆಗಿರುವಂತಿದೆ[೩] ಎಂಬ ಅಭಿಪ್ರಾಯವಿದೆ. ಶೀಗಿ ಶಿಲ್ಪವನ್ನು ಮಣ್ಣಿನಿಂದ ಇಲ್ಲವೆ ಮರದಿಂದ ಶಿಖರದ ಆಕಾರದಲ್ಲಿ ಮಾಡಿರುತ್ತಾರೆ. ಅದೇನೆ ಇದ್ದರೂ 'ಶೀಗಿ'ಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಸ್ತ್ರೀದೇವತೆಯಾಗಿ ಪೂಜಿಸುತ್ತಾರೆ. ಈ ಶೀಗಿಹುಣ್ಣಿಮೆ ಆಚರಣೆಯ ವಿವಿಧ ಸಂದರ್ಭಗಳಲ್ಲಿ ರಚಿಸಲಾಗುವ ಚಿತ್ರಕಲೆಯನ್ನು ಶೀಗಿ ಚಿತ್ರಕಲೆ ಎಂದು ಕರೆಯಲಾಗುತ್ತದೆ.

ಶೀಗಿ ಚಿತ್ರಕಲೆಯು ಜನಪದ ಕಲಾಪ್ರಕಾರವಾಗಿದ್ದು ತನ್ನದೇ ಆದ ವೈಲಕ್ಷಣಗಳನ್ನು ಹೊಂದಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ. ಶಾಸ್ತ್ರೋಕ್ತವಾದ ಪ್ರೌಢಕಲೆಗಳಿಗಿಂತ ಭಿನ್ನವಾದ ಜನಪದ ಚಿತ್ರಕಲೆ ತಲೆಮಾರಿನಿಂದ ತಲೆಮಾರಿಗೆ ಸ್ಮರಣಶಕ್ತಿ ಮಾಧ್ಯಮದಿಂದ ಉಳಿದುಬರುವ ಗುಣವನ್ನು ಹೊಂದಿದೆ. ನಗರ ವರ್ಗದವರ ಪ್ರಮಾಣಬದ್ಧ ಲಕ್ಷಣಯುಕ್ತ ಚಿತ್ರಕಲೆಯು ಶಿಷ್ಟಪದ ಚಿತ್ರಕಲೆ ಎನಿಸಿದರೆ, ಗ್ರಾಮೀಣರ ಲಕ್ಷಣಮುಕ್ತ ಅಥವಾ ತಮಗೆ ಅಂದಚಂದ ಕಂಡಂತೆ ರಚಿಸಿಕೊಂಡ ಕಲೆ ಜನಪದ ಚಿತ್ರಕಲೆಯಾಗಿದೆ.

ಜನಪದ, ಶಿಷ್ಟಪದ ಶಬ್ದಗಳಿಗೆ ಪ್ರಾಚೀನರು ದೇಶಿ-ಮಾರ್ಗ ಎಂಬುದಾಗಿ ಸಂವಾದಿಗಳನ್ನು ಬಳಸಿದ್ದಾರೆ. 'ದೇಶಿ'ಗೆ ದೇಶ ಸಂಬಂಧಿ ಎಂಬುದು ವಾಚ್ಯಾರ್ಥ. ಲಕ್ಷಣ ಮುಕ್ತವಾದ ರಚನೆ ಎಂಬುದು ವಿಶೇಷಾರ್ಥ. ಮಾರ್ಗಕ್ಕೆ 'ಪಥ' ಎಂಬುದು ವಾಚ್ಯಾರ್ಥ ಲಕ್ಷಣಯುಕ್ತವಾದದ್ದು ಎಂಬುದು ವಿಶೇಷಾರ್ಥ ಎಂದು ಹೇಳುತ್ತಾರೆ.[೪] ಪ್ರಾಕೃತ ಸಹಜವಾದದ್ದು ದೇಶಿಯಾಗಿ, ಈ ಪ್ರಾಕೃತ ಪರಿಸ್ಕೃತವಾಗಿ 'ಮಾರ್ಗ'ವಾಯಿತು ಎಂಬ ವಿಶ್ಲೇಷಣೆಯನ್ನು ಚಿತ್ರಕಲೆಗೂ ಅನ್ವಯಿಸ ಬಹುದಾಗಿದೆ.

ದೇಶಿ, ದೇಶಿಗ ಎಂಬ ಮಾತುಗಳು ಗ್ರಾಮೀಣ ಮನುಷ್ಯನನ್ನು ಕುರಿತು ಬಳಸಿದ ಮಾತುಗಳು. ಅಂತಹ ದೇಶಿ ಚಿತ್ರಗಳು ಜನಪದ ಚಿತ್ರಗಳು. ಪ್ರಮಾಣಬದ್ಧ ಆಕಾರ, ವಿನ್ಯಾಸಗಳನ್ನು ಜನಪದ ಚಿತ್ರಕಲೆಗೆ ಹೆಚ್ಚಾಗಿ ಅನ್ವಯಿಸುವಂತಿಲ್ಲ. ತಮ್ಮ ಬದುಕಿನ ಬಣ್ಣವನ್ನೇ ಅವರು ಸರಳವೋ, ವಕ್ರವೋ ಆದ ರೇಖೆಗಳಲ್ಲಿ, ಅನಿಯಮಿತ ಆಕಾರಗಳಲ್ಲಿ ಸಹಜ

ವೆಂಬಂತೆ ವ್ಯಕ್ತಗೊಳಿಸಿರುತ್ತಾರೆ. ವಸ್ತುವೊಂದು ಸಿದ್ಧರೂಪಗೊಳ್ಳುವಾಗ ಕಚ್ಚಾ ಸಾಮಗ್ರಿಯಾಗಿ ಇರುವಂತೆ ಇಂದಿನ ಶಿಷ್ಟರೂಪಕ್ಕೆ ಮೊದಲು ಕಚ್ಚಾರೂಪವೊಂದು ಇದ್ದು, ಕಾಲಕ್ರಮೇಣ ಅದು ಶಿಷ್ಟದ ಶಿಸ್ತಿಗೆ ಒಳಪಟ್ಟಿರುವುದು ತಿಳಿದುಬರುತ್ತದೆ.

ಸಂಪ್ರದಾಯ, ನಂಬಿಕೆ, ಧರ್ಮದ ಆಚರಣೆಯ ಹಿನ್ನೆಲೆಯಲ್ಲಿ ಜನಪದರಲ್ಲಿ ಮೂರ್ತರೂಪಕ್ಕೆ ತಿರುಗಿ ದುದೇ ಜನಪದ ಚಿತ್ರಕಲೆ. ಶಾಸ್ತ್ರೋಕ್ತವಾದ ಕಲಿಕೆಗೆ ಒಳಪಟ್ಟು, ಕಲೆಗಾಗಿ ಕಲೆ, ಆನಂದ ಕ್ಕಾಗಿ ಕಲೆ, ಪ್ರವೃತ್ತಿಗಾಗಿ ಕಲೆ ಎಂಬುದು ಶಿಷ್ಟಪದ ಚಿತ್ರಕಲೆಯ ಲಕ್ಷಣವಾದರೆ, ಬದುಕಿಗಾಗಿ ಪಟ್ಟಪಾಡೇ ಕಲೆ, ವೃತ್ತಿ ಮತ್ತು ಪ್ರವೃತ್ತಿಗಾಗಿ ಕಲೆ ಎಂದು ಜನಪದ ಚಿತ್ರಕಲೆಯಲ್ಲಿ ಪರಿಭಾವಿಸಬೇಕು. ಸಾಮಾಜಿಕ ಜೀವನದ ಒಳರಕ್ತಮಾಂಸಗಳನ್ನು ಅಮೂರ್ತ ಕಲ್ಪನೆಯ ಮೂಲಕ ಜಂಗಮವಾಗುವಂತೆ ಮಾಡುವ ಸಾಮರ್ಥ್ಯ ಜನಪದ ಚಿತ್ರಕಲೆಗಿದೆ. ಅವು ಸರಳ ಚೌಕಟ್ಟಿನೊಂದಿಗೆ, ಮನಸ್ಸಿನ ಸ್ವಾತಂತ್ರ್ಯದೊಂದಿಗೆ ಕೆಲವು ಸಾರಿ ಸಮೂಹವಾಗಿಯೇ ನಿತ್ಯಬಳಕೆಯಲ್ಲಿ ಬಂದದ್ದುಂಟು. ರಂಗೋಲಿ, ಬೆಳದಿಂಗಳು, ಗೋಡೆಯ ಮೇಲಿನ ತೇರು ಮುಂತಾದವು ವ್ಯಕ್ತಿ ಸೃಷ್ಠಿಯಾಗಿ ಸಮಷ್ಟಿಯ ಗುಂಪಾಗಿ ಪ್ರವರ್ತಿಸುತ್ತವೆ.[೫]

ಅಂದರೆ ಇಲ್ಲಿ ಚಿತ್ರಕಲೆ ಆಚರಣೆಯಾಗಿ, ಸಂಪ್ರದಾಯವಾಗಿ ಗುಂಪಿನ ಇಲ್ಲವೇ ತಮ್ಮ ಪಾಲಿನ ಸಾಮಾಜಿಕ ಚಟುವಟಿಕೆಯಾಗಿ ಅರ್ಥಪಡೆದು ನಿಲ್ಲುತ್ತದೆ.

ಶಿಷ್ಟಪದ ಚಿತ್ರಕಲೆ ಬಿಡುವಿನ ವೇಳೆಯಲ್ಲಿ ಹುಟ್ಟಿದರೆ, ಜನಪದ ಚಿತ್ರಕಲೆ ದುಡಿಯುವ ಸಮಯದಲ್ಲಿ ಸೃಷ್ಠಿಯಾಗುತ್ತದೆ. ಒಂದು ವ್ಯಷ್ಠಿಯ ಸೃಷ್ಠಿ ಎನಿಸಿದರೆ, ಇನ್ನೊಂದು ಸಮಷ್ಠಿಯ ಸೃಷ್ಠಿಯಾಗಿದೆ. ಜನಪದರ ತೆರೆದ ಬದುಕಿನಂತೆಯೇ ಅವರ ಚಿತ್ರಕಲೆಯೂ ಕೂಡಾ. ಬದುಕಿನ ಹುಟ್ಟು, ಸಾವು, ಬೆತ್ತಲೆಯಲ್ಲಿ ಪ್ರಕಟವಾಗುವ ಅಂಶಗಳು ಇಲ್ಲಿ ನೇರವಾಗಿ ಅಭಿವ್ಯಕ್ತಿ ಪಡೆದುಕೊಂಡಿರುತ್ತವೆ.

ದಪ್ಪನಾದ ರೇಖೆಗಳು ಜನಪದ ಚಿತ್ರಕಲೆಯ ಜೀವಾಳವಾಗಿದ್ದು, ದೈನಂದಿನ ಬದುಕಿನ ವಿವರಗಳು ಚಿತ್ರರಚನೆಯ ವಿಷಯಗಳಾಗಿರುತ್ತವೆ. ಹಳದಿ, ಕೆಂಪು, ಕಪ್ಪು, ಬಿಳಿ, ನಸುಕೆಂಪು, ಹಸಿರು, ಜಾಂಬಳಿ ಮುಂತಾದ ಪ್ರಖರ ವರ್ಣಗಳನ್ನು ಜನಪದ ಚಿತ್ರಕಲೆಯಲ್ಲಿ ಕಾಣಬಹುದು. ಹೀಗೆ ಇನ್ನೂ ಹಲವಾರು ಲಕ್ಷಣಗಳನ್ನು ಜನಪದ ಚಿತ್ರಕಲೆಯಲ್ಲಿ ಗುರುತಿಸಬಹುದಾಗಿದ್ದು, ಈ ಲಕ್ಷಣಗಳು ಶೀಗಿ ಚಿತ್ರಕಲೆಯಲ್ಲಿಯೂ ಕಂಡುಬರುತ್ತದೆ.

ಶೀಗಿ ಚಿತ್ರಕಲೆಯನ್ನು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಸ್ವರೂಪ, ಮಾಧ್ಯಮ ಮತ್ತು ಸ್ಥಳಗಳಲ್ಲಿ ರಚನೆ ಮಾಡಲಾಗುತ್ತದೆ. ಬೀದರ್ ಭಾಗದಲ್ಲಿ ಮನೆಯ ಹೊರಗೋಡೆಯಲ್ಲಿ ಚಿತ್ರಿಸಿದರೆ, ಬಾಗಲಕೋಟ್, ವಿಜಾಪುರ, ಬೆಳಗಾಂವ, ಧಾರವಾಡ ಭಾಗಗಳಲ್ಲಿ ಮನೆಯ ಒಳಗೋಡೆಯಲ್ಲಿ ಚಿತ್ರ ಬರೆಯುತ್ತಾರೆ.

ಹಾಗೆಯೇ ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಶೀಗಿಹುಣ್ಣಿಮೆಯಲ್ಲಿ ಚರಗದ ಬುಟ್ಟಿಯ ಮೇಲೆ ಮತ್ತು ಮಲೆನಾಡಿನ ಕೆಲವು ಪ್ರದೇಶದಲ್ಲಿ ಬಿದಿರಿನಿಂದ ತಯಾರಿಸಿದ ಬುಟ್ಟಿಗಳ ಮೇಲೆ ಚಿತ್ರರಚನೆ ಮಾಡುತ್ತಾರೆ. ಅಲ್ಲದೇ ಶೀಗಿ ಕಳಿಸುವ ಪೂಜೆಯ ಸಂದರ್ಭ ದಲ್ಲಿ ಹೊಸದಾದ ಮಣ್ಣಿನ ಗಡಿಗೆಗಳ ಮೇಲೆ ಚಿತ್ರ ರಚಿಸುತ್ತಾರೆ. ಹೀಗೆ ಬೇರೆಬೇರೆ ಮಾಧ್ಯಮ, ಸ್ವರೂಪ, ಸ್ಥಳಗಳಲ್ಲಿ ರಚನೆಯಾಗುವ ಶೀಗಿ ಚಿತ್ರಕಲೆಯನ್ನು ಅಧ್ಯಯನದ ಅನುಕೂಲ ದೃಷ್ಟಿಯಿಂದ ಈ ಕೆಳಗಿನಂತೆ ವಿಂಗಡಿಸಿಕೊಂಡು ವಿವರಿಸಬಹುದು.

೧. ಹೊರಗೋಡೆಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

೨. ಒಳಗೋಡೆಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

೩. ಬಿದಿರುಬುಟ್ಟಿಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

೪. ಮಣ್ಣಿನ ಪಾತ್ರೆಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

೫. ಕಲ್ಲಿನ ಗುಂಡುಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

## ೧. ಹೊರಗೋಡೆಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

ಶೀಗಿ ಆಚರಣೆಯ ಸಂದರ್ಭದಲ್ಲಿ ಮನೆಯ ಹೊರಗೋಡೆಯ ಮೇಲೆ ಬಿಡಿಸುವ ಚಿತ್ರಕಲೆ ಇದಾಗಿದೆ. ಬೀದರ್ ಭಾಗದಲ್ಲಿ ಮಾತ್ರ ಈ ಪದ್ಧತಿ ವಿಶೇಷವಾಗಿ ಕಂಡು ಬರುತ್ತದೆ.[೬] ಮಹಾನವಮಿ ದಿನದಿಂದ ಹಿಡಿದು ಮುಂದೆ ಶೀಗಿಹುಣ್ಣಿಮೆಯ ತನಕ ಬರುವ ಏಳು ಅಥವಾ ಐದು ದಿನಗಳವರೆಗೆ ಪ್ರತಿದಿನ ಶೀಗಿ ಹಾಡುಗಳನ್ನು ಹೇಳುತ್ತ ಅದೇ ಸಂದರ್ಭ ದಲ್ಲಿ ಹಾಡಿನ ಲಯ, ಮಾಧುರ್ಯಕ್ಕೆ ಅನುಸಾರವಾಗಿ ತಲೆದೂಗುತ್ತ ಚಿತ್ರಗಳನ್ನು ಬಿಡಿಸುವ ಪದ್ಧತಿ ಇದೆ.

ಈ ಚಿತ್ರಗಳನ್ನು ಮನೆಯ ಹೊರಬಾಗಿಲು (ದ್ವಾರ ಬಾಗಿಲು) ಪಕ್ಕದಲ್ಲಿ ಎಡ ಇಲ್ಲವೇ ಬಲಭಾಗದ ಗೋಡೆಯಲ್ಲಿ ರಚಿಸುತ್ತಾರೆ. ಸಾಯಂಕಾಲ ಹೊತ್ತು ಮುಳುಗಿದ ಮೇಲೆ ರಾತ್ರಿಗಿಂತ ಮೊದಲಿನ ಜಾವದಲ್ಲಿಯೇ ಓಣಿಯ ಹೆಂಗಸರು ಒಂದುಕಡೆ ಕೂಡಿ ಪ್ರತಿಯೊಂದು ಮನೆಯ ಮುಂದೆ ಹೋಗಿ ಹಾಡು ಹಾಡುತ್ತಾರೆ.[೭]

ಇವರು ಹಾಡಿದಂತೆ ಆ ಮನೆಯ ಹೆಂಗಸು ತನ್ನಲ್ಲಿರುವ ಕುಕ್ಕೀ ಹೂ ಮತ್ತು ಕಾರಾಳ ಹೂಗಳನ್ನು ಸೆಗಣಿಯ ವಿನ್ಯಾಸದಲ್ಲಿ ಊರುತ್ತ ಹೋಗುತ್ತಾಳೆ. ಕೊನೆಯಲ್ಲಿ ಆರತಿ ಮಾಡಿ ಎಲ್ಲರೂ ಫಳಾರ ತಿನ್ನುತ್ತಾರೆ. ಮತ್ತೆ ಮುಂದಿನ ಮನೆಗೆ ಶೀಗಿಹಾಡಲು ಸಾಗುತ್ತಾರೆ. ಇವರನ್ನು ಶೀಗವ್ವನ ಮಕ್ಕಳು ಇಲ್ಲವೆ ಗೌರಿಮಕ್ಕಳು ಎಂದು ಕರೆಯಲಾಗುತ್ತದೆ. ಏಳು ಇಲ್ಲವೇ ಐದು ದಿನಗಳು ನಡೆಯುವ ಈ ಗೀತಪ್ರಧಾನ ಚಿತ್ರಕಲೆಯನ್ನು ಈ ಕೆಳಗಿನಂತೆ ವಿಂಗಡಿಸಿ ವಿವರಿಸಬಹುದು.

೧. ಸ್ವರೂಪ
೨. ಮಾಧ್ಯಮ
೩. ಪರಿಕರಗಳು
೪. ಸಿದ್ಧತಾ ಹಂತ
೫. ಚಿತ್ರರಚನಾ ವಿಧಾನ
೬. ವಸ್ತು ವಿಷಯಗಳು

## ೧. ಸ್ವರೂಪ

ಹೊರಗೋಡೆಯ ಮೇಲೆ ಚಿತ್ರಿಸುವ ಈ ಶೀಗಿ ಚಿತ್ರಕಲೆಯು ವಿಶಿಷ್ಟ ಸ್ವರೂಪ ಪಡೆದು ಕೊಂಡಿದೆ. ಶಿಲ್ಪ ಮತ್ತು ಚಿತ್ರ ಎರಡರ ಲಕ್ಷಣಗಳನ್ನು ಇದು ಹೊಂದಿದೆ. ಅಂದರೆ ಹುಣ್ಣಿಮೆ ಯವರೆಗಿನ ಆರು ದಿನಗಳು ಗೋಡೆಯ ಮೇಲೆ ಆಕಳ ಸೆಗಣಿಯಿಂದ ಉಬ್ಬುಶಿಲ್ಪ ವಿನ್ಯಾಸ ಗಳನ್ನು ರಚಿಸಿ, ಅದಕ್ಕೆ ಹೂಗಳನ್ನು ಚುಚ್ಚಿ ಅಲಂಕರಿಸುತ್ತಾರೆ. ಆದರೆ ಹುಣ್ಣಿಮೆಯ ದಿನ ಮಾತ್ರ ಗೋಡೆಯನ್ನು ಚೆನ್ನಾಗಿ ಸಾರಿಸಿ ಅದರ ಮೇಲೆ ಬಣ್ಣಗಳಿಂದ ಚಿತ್ರ ರಚನೆ ಮಾಡು ತ್ತಾರೆ. ಹಾಗಾಗಿ ತ್ರಿಆಯಾಮದ ಶಿಲ್ಪ ಲಕ್ಷಣಗಳು ಮತ್ತು ದ್ವಿಆಯಾಮದ ಚಿತ್ರ ಲಕ್ಷಣಗಳು ಈ ಹೊರಗೋಡೆಯ ಶೀಗಿ ಚಿತ್ರಕಲೆಯ ಸ್ವರೂಪದಲ್ಲಿ ಕಂಡುಬರುತ್ತವೆ. ಮನೆಯ ಹೊರ ಬಾಗಿಲಿನ ಎಡ ಅಥವಾ ಬಲಭಾಗದಲ್ಲಿ ಸಹಜವಾಗಿ ಕೈಗೆಟಕುವ ಅಂತರದಲ್ಲಿ ಗೋಡೆಯ ಮೇಲೆ ರಚನೆಯಾಗಿರುತ್ತವೆ.

## ೨. ಮಾಧ್ಯಮ

ಬಾಗಿಲಿನ ಹೊರಗೋಡೆಯಲ್ಲಿ ಚಿತ್ರರಚನೆ ಮಾಡಲಾಗುತ್ತಿದ್ದು, ಮೊದಲಿಗೆ ಗೋಡೆ ಯನ್ನು ಸಾರಿಸಲು ಜೇಡಿಮಣ್ಣು, ಸುಣ್ಣ ಬೇಕಾಗುತ್ತವೆ. ನಂತರ ಸೆಗಣಿಯಿಂದ ವಿನ್ಯಾಸಗಳನ್ನು ರೂಪಿಸುವುದು, ಆಮೇಲೆ ಹೂಗಳಿಂದ ಅಲಂಕರಿಸುವುದು ನಡೆಯುತ್ತದೆ. ಕೊನೆಯದಿನ ಬಣ್ಣದ ಮಾಧ್ಯಮದಿಂದ ಗೋಡೆಯ ಮೇಲೆ ಚಿತ್ರಿಸಲಾಗುತ್ತದೆ. ಹಾಗಾಗಿ ಇಲ್ಲಿನ ಚಿತ್ರ ವಿನ್ಯಾಸಗಳಲ್ಲಿ ಪ್ರಮುಖವಾಗಿ ಮಣ್ಣು, ಸೆಗಣಿ, ಹೂ, ಸುಣ್ಣ, ಹುರಿಮಂಜು ಮತ್ತು ಬಣ್ಣ ಮಾಧ್ಯಮಗಳು ಬಳಕೆಯಾಗುತ್ತವೆ.

## ೩. ಪರಿಕರಗಳು

ಯಾವುದೇ ಕಲಾಕೃತಿ ರೂಪುಗೊಳ್ಳಲು ಬೇರೆಬೇರೆ ಪರಿಕರಗಳು ಬೇಕಾಗುತ್ತವೆ. ಸಾಮಾನ್ಯ ವಾಗಿ ಚಿತ್ರಕಲಾಕೃತಿಯೊಂದು ರೂಪುಗೊಳ್ಳಲು ಕಾಗದ, ಅರಿವೆ, ಸೀಸುಕಡ್ಡಿ, ಬಣ್ಣ, ಕುಂಚ ಗಳಲ್ಲದೇ ಬಣ್ಣಗಳನ್ನು ಮಿಶ್ರಮಾಡಿಕೊಳ್ಳಲು ತಟ್ಟೆಯಂತಹ ವಸ್ತುಗಳು ಬೇಕು. ಹಾಗೆಯೇ ಶಿಲ್ಪರಚನೆಗೆ ಕಲ್ಲು, ಮರಗಳಂತಹ ಕಚ್ಚಾವಸ್ತುಗಳಲ್ಲದೇ ಅದನ್ನು ಶಿಲ್ಪವಾಗಿ ರೂಪಿಸಲು ಸುತ್ತಿಗೆ, ಉಳಿ, ಅರಗಳಂತಹ ಬೇರೆಬೇರೆ ಪರಿಕರಗಳು ಬೇಕಾಗುತ್ತವೆ.

ಅದೇ ರೀತಿಯಾಗಿ ಹೊರಗೋಡೆಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆಗೆ ವಿವಿಧ ಬಗೆಯ ಪರಿಕರಗಳು ಬೇಕಾಗುತ್ತವೆ. ಇಲ್ಲಿ ಬಳಕೆಯಾಗುವ ಪರಿಕರಗಳನ್ನು ಪ್ರಮುಖವಾಗಿ

ಅ. ಸಿದ್ಧತಾ ಪರಿಕರಗಳು

ಬ. ಚಿತ್ರರಚನಾ ಪರಿಕರಗಳು

ಎಂಬುದಾಗಿ ವಿಂಗಡಿಸಿಕೊಂಡು ವಿವೇಚಿಸಬಹುದು.

**ಅ. ಸಿದ್ಧತಾ ಪರಿಕರಗಳು**

ಚಿತ್ರರಚನೆಗೆ ಪೂರ್ವದಲ್ಲಿ ಭಿತ್ತಿಯನ್ನು ಸಿದ್ಧಗೊಳಿಸುವಾಗ ಬೇಕಾಗುವ ಪರಿಕರಗಳನ್ನು ಸಿದ್ಧತಾ ಪರಿಕರಗಳೆಂದು ಕರೆಯಬಹುದು. ಜೇಡಿಮಣ್ಣು, ಸುಣ್ಣ, ಪೊರಕೆಯಂತಹ ಸಾಧನ ಗಳು, ಪಾತ್ರೆಗಳು ಮುಂತಾದವು ಇದರಲ್ಲಿ ಒಳಗೊಳ್ಳುತ್ತವೆ.

**ಬ. ಚಿತ್ರರಚನಾ ಪರಿಕರಗಳು**

ಸಿದ್ಧಗೊಳಿಸಿದ ಭಿತ್ತಿಯ ಮೇಲೆ ಚಿತ್ರವಿನ್ಯಾಸ ರೂಪಿಸಲು ಬೇಕಾಗುವ ಪರಿಕರಗಳು ಈ ಗುಂಪಿನಲ್ಲಿ ಸೇರುತ್ತವೆ. ಆಕಳ ಸೆಗಣಿ, ಕುಕ್ಕೇ ಹೂ, ಕಾರಾಳ ಹೂ, ಕುಂಚಗಳು, ಬಣ್ಣಗಳು, ಅಂಟುದ್ರಾವಣ, ಬಣ್ಣ ಮಿಶ್ರಗೊಳಿಸುವ ತಟ್ಟೆಗಳು ಇಲ್ಲಿ ಬೇಕಾಗುತ್ತವೆ.

**ಆಕಳ ಸೆಗಣಿ :** ಹುಣ್ಣಿಮೆಯವರೆಗಿನ ಆರು ದಿನಗಳು ಸೆಗಣಿಯಿಂದಲೇ ಚಿತ್ರವಿನ್ಯಾಸ ಗಳನ್ನು ರೂಪಿಸಲಾಗುತ್ತದೆ. ಇದಕ್ಕಾಗಿ ಪವಿತ್ರತೆಯ ದೃಷ್ಟಿಯಿಂದ ಅದೇ ದಿನ ಸಂಗ್ರಹಿಸ ಲಾದ ಆಕಳ ಮತ್ತು ಎತ್ತಿನ ಸೆಗಣಿಯನ್ನು ಮಾತ್ರ ಉಪಯೋಗಿಸಲಾಗುತ್ತದೆ. ಆಕಳು ಗಾಯತ್ರಿ ಎತ್ತು ಬಸವಣ್ಣ. ಹಾಗಾಗಿ ಅವು ದೇವತಾ ಸ್ವರೂಪ. ಆಕಳ ಸೆಗಣಿಯ ಶ್ರೇಷ್ಠತೆ ಯನ್ನು ಬಿಂಬಿಸುವ ಕಥೆಯೊಂದು ಮಹಾಭಾರತದಲ್ಲಿ ಕಂಡು ಬರುತ್ತದೆ. ಅದು ಲಕ್ಷ್ಮೀಯ ಪ್ರತಿರೂಪ. ಜೊತೆಗೆ ವೈಜ್ಞಾನಿಕವಾಗಿ ಕ್ರಿಮಿನಾಶಕ ಶಕ್ತಿ ಪಡೆದುಕೊಂಡಿದೆ. ಇಂತಹ ಹಲವು ಕಾರಣಗಳಿಂದ ಆಕಳ ಸೆಗಣಿಯನ್ನು ಶೀಗಿ ಶಿಲ್ಪರಚನೆಗೆ ಬಳಸಿಕೊಂಡಿದ್ದರಲ್ಲಿ ಆಶ್ಚರ್ಯ ವಿರಲಾರದು.

**ಹೂಗಳು :** ಕುಕ್ಕೇ ಹೂ ಮತ್ತು ಕಾರಾಳ ಹೂಗಳನ್ನು ಸೆಗಣಿಯ ಶಿಲ್ಪವಿನ್ಯಾಸದಲ್ಲಿ ಊರುತ್ತ ಅಲಂಕರಿಸುತ್ತಾರೆ. ಕುಕ್ಕೇ ಹೂ, ಕಾರಾಳ ಹೂ ಸಿಗದೇ ಇದ್ದಾಗ ಸ್ಥಳೀಯವಾಗಿ ದೊರಕುವ ಯಾವುದೇ ಹೂಗಳನ್ನು ಉಪಯೋಗಿಸುತ್ತಾರೆ.

**ಕುಂಚಗಳು :** ಇಲ್ಲಿನ ಚಿತ್ರವಿನ್ಯಾಸಕ್ಕಾಗಿ ಕುಂಚಗಳನ್ನು ಸ್ಥಳೀಯ ವಸ್ತುಗಳಿಂದ ನಿರ್ಮಿಸಿ ಕೊಳ್ಳುತ್ತಾರೆ. ತೆಂಗಿನ ನಾರು, ಹುಲ್ಲಿನ ಗರಿಕೆ, ಹಸಿಯಾದ ಗಿಡದ ಟೊಂಗೆಗಳಿಂದ ಕುಂಚ ಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಅಲ್ಲದೇ ಒಂದು ಕಟ್ಟಿಗೆಯ ತುದಿಗೆ ಬಟ್ಟೆಯನ್ನು ಸುತ್ತಿ ಕುಂಚವಾಗಿ ಉಪಯೋಗಿಸುತ್ತಾರಲ್ಲದೇ, ಕೆಲವು ಸಂದರ್ಭದಲ್ಲಿ ಬೆರಳಿನಿಂದಲೇ ಬಣ್ಣ

ಲೇಪಿಸುತ್ತಾರೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ದೊರೆಯುವ ಸಿದ್ಧ ಕುಂಚಗಳನ್ನು ಉಪಯೋಗಿಸುತ್ತಿದ್ದಾರೆ.

**ಬಣ್ಣಗಳು :** ಶೀಗಿಚಿತ್ರಕಲೆಯಲ್ಲಿ ಸ್ಥಳೀಯವಾಗಿ ದೊರಕುವ ಪ್ರಾಕೃತಿಕ ವಸ್ತುಗಳಿಂದಲೇ ಬಣ್ಣ ತಯಾರಿಸಿಕೊಳ್ಳುತ್ತಾರೆ. ಮಣ್ಣಿನ ಗಟ್ಟಿಗಳು, ವಿವಿಧ ಸಸ್ಯಗಳ ಎಲೆ, ಹೂ, ಹಣ್ಣು, ಕಾಂಡ, ಬೀಜಗಳಿಂದ ಬೇಕಾದ ಬಣ್ಣವನ್ನು ತಾವೇ ಸರಳ ವಿಧಾನಗಳಿಂದ ತಯಾರಿಸಿಕೊಂಡು ಚಿತ್ರ ರಚಿಸುತ್ತಾರೆ.

ಮಣ್ಣಿನ ಗಟ್ಟಿಗಳಿಂದ ತಯಾರಿಸುವ ಬಣ್ಣಗಳಲ್ಲಿ ಕೆಂಪು, ಕಂದುಗೆಂಪು, ತೆಳುಹಳದಿ, ದಟ್ಟಹಳದಿ ಬಣ್ಣದ ಮಣ್ಣಿನ ಗಟ್ಟಿಗಳನ್ನು ಸಂಗ್ರಹಿಸಿ, ಅವುಗಳನ್ನು ಕುಟ್ಟಿ ಪುಡಿಮಾಡಿ ಅಂಟುದ್ರಾವಕದಲ್ಲಿ ಕಲಸಿ ಚಿತ್ರಗಳಿಗೆ ಉಪಯೋಗಿಸುತ್ತಾರೆ.

ಸಸ್ಯಗಳಿಂದ ತಯಾರಿಸುವ ಬಣ್ಣಗಳಲ್ಲಿ ಬಂಗಾಲಿ ಗಿಡದ ಹೂ ಕಾಯಿಗಳಿಂದ ಹಳದಿ ಬಣ್ಣ, ಹೂಲಿ ಗಿಡದಿಂದ ನೀಲಿಬಣ್ಣ, ಅರಿಸಿಣ ಸುಣ್ಣಗಳ ಮಿಶ್ರಣದಿಂದ ಕೇಸರಿಬಣ್ಣ, ಜೀರಿಗೆ, ಅರಳಿಕಾಯಿ ಮಿಶ್ರಣದಿಂದ ಕಪ್ಪುಬಣ್ಣ, ಜಾಲಿಗಿಡದ ಕಾಯಿಗಳಿಂದ ನೇರಳೆಬಣ್ಣ ಪಡೆದುಕೊಳ್ಳುತ್ತಾರೆ. ಹೀಗೆ ಸಂದರ್ಭಕ್ಕೆ ಅನುಸಾರವಾಗಿ, ಚಿತ್ರ ರಚನಾಕಾರರ ಇಚ್ಛಾನುಸಾರ ಸ್ಥಳೀಯವಾಗಿ ಲಭ್ಯವಾಗುವ ಯಾವುದೇ ವಸ್ತುಗಳಿಂದ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ.

**ಅಂಟುದ್ರಾವಣ :** ಚಿತ್ರ ರಚನೆಗಾಗಿ ಸಿದ್ಧ ವರ್ಣಗಳು ಇಂದು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಇವುಗಳಿಗೆ ಯಾವುದೇ ಅಂಟು ದ್ರಾವಣದ ಅವಶ್ಯಕತೆ ಇಲ್ಲ. ಆದರೆ ಹುಡಿ ವರ್ಣಗಳನ್ನು ಮಾತ್ರ ಯೋಗ್ಯ ಅಂಟುದ್ರಾವಕದಲ್ಲಿ ಮಿಶ್ರಣಮಾಡಿ ಉಪಯೋಗಿಸಲಾಗುತ್ತದೆ. ಅದೇ ರೀತಿ ಜನಪದರು ತಮ್ಮ ಚಿತ್ರಗಳಿಗಾಗಿ ತಾವೇ ತಯಾರಿಸಿಕೊಂಡ ಬಣ್ಣಗಳಿಗೆ ಅಂಟುದ್ರಾವಕವನ್ನು ಬೆರೆಸಿ ಉಪಯೋಗಿಸುತ್ತಾರೆ. ಬಣ್ಣಕ್ಕೆ ಅಂಟುದ್ರಾವಕವನ್ನು ಬೆರೆಸುವುದರಿಂದ ಹೆಚ್ಚುಕಾಲ ಬಾಳಿಕೆ ಬರುತ್ತದಲ್ಲದೇ ಹೊಳಪು ಮತ್ತು ಅಂಟುವ ಗುಣ ಅಧಿಕವಾಗುತ್ತದೆ.

ಶೀಗಿಚಿತ್ರ ರಚನಾಕಾರರು ಬಣ್ಣಗಳನ್ನು ಕಲಸಿಕೊಳ್ಳಲು ಸಸ್ಯಮೂಲ ಮತ್ತು ಪ್ರಾಣಿಮೂಲ ಅಂಟುದ್ರಾವಕಗಳನ್ನು ಬಳಸಿಕೊಳ್ಳುತ್ತಾರೆ. ಸಸ್ಯಮೂಲ ಅಂಟುದ್ರಾವಕಗಳಲ್ಲಿ ಬಿಲ್ವಪತ್ರಿಕಾಯಿಯ ಅಂಟು, ಜಾಲಿ, ಬೇವು ಮುಂತಾದ ವಿವಿಧ ಮರಗಳ ಕಾಂಡದಿಂದ ಹುಟ್ಟುವ ಅಂಟುಗಳನ್ನು ಬಳಸುತ್ತಾರೆ.

ಪ್ರಾಣಿಮೂಲ ಅಂಟು ದ್ರಾವಕದಲ್ಲಿ ವಜ್ರಲೇಪ (ವಜ್ರಸರಿ)ವನ್ನು ಉಪಯೋಗಿಸಲಾಗುತ್ತದೆ. ಪ್ರಾಣಿಗಳ ಎಲುಬು, ಚರ್ಮಗಳಿಂದ ಕುದಿಸುವ ವಿಧಾನದಿಂದ ತಯಾರಿಸಲಾಗುವ ಈ ಅಂಟನ್ನು ಚಿತ್ರಕಾರರು ಬಹು ಪ್ರಾಚೀನ ಕಾಲದಿಂದಲೇ ಬಳಸುತ್ತ ಬಂದಿದ್ದಾರೆ. ಇತ್ತೀಚೆಗೆ ಇದು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿದೆ. ಇದಕ್ಕೆ ಪರ್ಯಾಯವಾಗಿ ಮೀನಸರಿಯು ಈಗ

ಹೆಚ್ಚಾಗಿ ಬಳಸಲ್ಪಡುತ್ತಿದೆ. ತೆಳುವಾದ ಬಿಲ್ಲೆಯ ರೂಪದಲ್ಲಿ ಇದು ದೊರಕುತ್ತಿದ್ದು ಇದನ್ನು ಕುದಿಸಿ ಕರಗಿಸಿ ಚಿತ್ರಗಳಿಗೆ ಉಪಯೋಗಿಸುತ್ತಾರೆ.

**ಬಣ್ಣ ಮಿಶ್ರಗೊಳಿಸುವ ತಟ್ಟೆಗಳು :** ಶೀಗಿಚಿತ್ರ ರಚಿಸುವ ಜನಪದ ಚಿತ್ರಕಾರರು ಬಣ್ಣಗಳನ್ನು ಮಿಶ್ರಮಾಡಿಕೊಳ್ಳಲು ಟೆಂಗಿನಚಿಪ್ಪು ಮತ್ತು ಮಣ್ಣಿನ ಮುಚ್ಚಳದಂತಹ ಪಾತ್ರೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇತ್ತೀಚೆಗೆ ಲೋಹದ ಪಾತ್ರೆಗಳನ್ನೂ ಬಳಸಲಾಗುತ್ತಿದೆ. ಈ ರೀತಿಯ ಪರಿಕರಗಳನ್ನು ಬಳಸಿಕೊಂಡು ಶೀಗಿ ಚಿತ್ರಗಳನ್ನು ರಚಿಸಲಾಗುತ್ತದೆ.

**೪. ಸಿದ್ಧತಾ ಹಂತ**

ಶೀಗಿಚಿತ್ರ ರಚನೆಗೆ ಪೂರ್ವದಲ್ಲಿ ಚಿತ್ರರಚನೆ ಮಾಡಬೇಕಾದ ಭಿತ್ತಿಯನ್ನು ಚಿತ್ರರಚನೆಗಾಗಿ ಸಂಸ್ಕರಿಸಿ ಸಿದ್ಧಗೊಳಿಸಲಾಗುತ್ತದೆ. ಇದನ್ನೇ ಸಿದ್ಧತಾ ಹಂತವೆಂದು ಕರೆಯಲಾಗುತ್ತದೆ. ಮೊದಲಿಗೆ ಚಿತ್ರ ರಚಿಸಲಾಗುವ ಗೋಡೆಗೆ ಜೇಡಿಮಣ್ಣು, ಸುಣ್ಣ, ಸಗಣಿಗಳ ಮಿಶ್ರಣವನ್ನು ಲೇಪಿಸಿ ಸಮತಟ್ಟು ಮಾಡಲಾಗುತ್ತದೆ. ನಂತರ ಸುಣ್ಣವನ್ನು ಲೇಪಿಸಿ ಅದರ ಮೇಲೆ ಚಿತ್ರ ವಿನ್ಯಾಸ ರೂಪಿಸಲಾಗುತ್ತದೆ.

ಹದವಾದ, ಜಿಗುಟಾದ ಜೇಡಿಮಣ್ಣನ್ನು ಶೋಧಿಸಿ ಕಲ್ಲು ಹರಳುಗಳಿಂದ ಮುಕ್ತಗೊಳಿಸಿ ಅದಕ್ಕೆ ಸುಣ್ಣ ಸೆಗಣಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಗೊಳಿಸಿ ಕೊಂಡು ಒಂದು ಪಾತ್ರೆಯಲ್ಲಿ (ಬುಟ್ಟಿ) ಹಾಕಿಕೊಂಡು ಗೋಡೆಗೆ ಲೇಪಿಸುತ್ತಾರೆ. ಗೋಡೆಯ ಮೇಲ್ಮೈ ಸಮನಾಗುವತನಕ ಹಲವಾರು ಬಾರಿ ಲೇಪಿಸಲಾಗುತ್ತದೆ. ಅನಂತರ ಅದು ಒಣಗಿದ ಮೇಲೆ ಒಂದು ಪಾತ್ರೆಯಲ್ಲಿ ಗಟ್ಟಿಯಾದ ಸುಣ್ಣವನ್ನು ಹಾಕಿಕೊಂಡು ಹುಲ್ಲಿನ ಚಿಕ್ಕದಾದ ಕಸಬರಿಗೆಯಿಂದ ಗೋಡೆಗೆ ಲೇಪಿಸಬೇಕು. ಈ ಸುಣ್ಣದ ಲೇಪನ ಒಣಗಿದ ನಂತರ ಚಿತ್ರ ವಿನ್ಯಾಸ ರೂಪಿಸಲಾಗುತ್ತದೆ. ಆರು ದಿನಗಳ ಸೆಗಣಿಯ ವಿನ್ಯಾಸಗಳನ್ನು ಸಾಯಂಕಾಲದ ಹೊತ್ತು ರೂಪಿಸಲಾಗುತ್ತದೆ. ಇದಕ್ಕಾಗಿ ಹಗಲು ಹೊತ್ತಿನಲ್ಲಿಯೇ ಭಿತ್ತಿ ಸಿದ್ಧಗೊಳಿಸಿಕೊಂಡು ಇಟ್ಟಿರುತ್ತಾರೆ.

**೫. ಚಿತ್ರರಚನಾ ವಿಧಾನ**

ಮೊದಲೇ ಸಿದ್ಧಮಾಡಿಟ್ಟುಕೊಂಡ ಭಿತ್ತಿಯ ಮೇಲೆ ಸ್ತ್ರೀಯರು ಚಿತ್ರವಿನ್ಯಾಸ ರೂಪಿಸುತ್ತಾರೆ. ಮೊದಲ ಆರುದಿನಗಳು ಸೆಗಣಿಯಿಂದ ವಿನ್ಯಾಸ ರೂಪಿಸಿದರೆ, ಏಳನೆಯ ದಿನ ಹುಣ್ಣಿಮೆಯಂದು ಬಣ್ಣಗಳಿಂದ ಚಿತ್ರ ಬರೆಯಲಾಗುತ್ತದೆ. ಪ್ರತಿಯೊಂದು ದಿನ ಬೇರೆಬೇರೆ ಚಿತ್ರ ವಿನ್ಯಾಸಗಳನ್ನು ರೂಪಿಸುವ ಈ ಶೀಗಿ ಚಿತ್ರರಚನೆಯ ವಿಧಾನವನ್ನು ಈ ಕೆಳಗಿನಂತೆ ಎರಡು ರೀತಿಯಲ್ಲಿ ವಿಂಗಡಿಸಬಹುದು.

ಅ. ಸೆಗಣಿಯಿಂದ ಉಬ್ಬುಶಿಲ್ಪ ರಚಿಸುವ ವಿಧಾನ

ಬ. ಬಣ್ಣಗಳಿಂದ ಚಿತ್ರ ಬರೆಯುವ ವಿಧಾನ

## ಅ. ಸೆಗಣಿಯಿಂದ ಉಬ್ಬುಶಿಲ್ಪ ರಚಿಸುವ ವಿಧಾನ

ಮೊದಲಿನ ಆರು ದಿನಗಳು ಸೆಗಣಿಯಿಂದ ಉಬ್ಬುಶಿಲ್ಪ ರಚಿಸಿ ಹೂಗಳಿಂದ ಅಲಂಕರಿಸುವ ವಿಧಾನವನ್ನು ಸ್ಥೂಲವಾಗಿ ಈ ಕೆಳಗಿನಂತೆ ಹೇಳಬಹುದು. ಅದೇ ದಿನ ಸಂಗ್ರಹಿಸಿದ ಆಕಳ ಸೆಗಣಿಯನ್ನು ತಕ್ಕಷ್ಟು ನೀರು ಹಾಕಿ ಕಲಸಿಕೊಳ್ಳಬೇಕು. ಇದಕ್ಕಾಗಿ ಮಣ್ಣಿನ ಅಗಲವಾದ ಪಾತ್ರೆ ಇಲ್ಲವೇ ಕಬ್ಬಿಣಬುಟ್ಟಿಗಳನ್ನು ಬಳಸುತ್ತಾರೆ. ಕೆಲವರು ಕಬ್ಬಿಣದ ಬಕೀಟನ್ನು ಕೂಡಾ ಬಳಸುತ್ತಾರೆ. ಇಲ್ಲಿ ಸೆಗಣಿಯನ್ನು ಮಂದವಾಗಿ ಕಲಸಿಕೊಳ್ಳುವಾಗ ಜಾಗರೂಕವಾಗಿರಬೇಕಾಗುತ್ತದೆ. ಅತೀ ನೀರಾದರೆ ಗೋಡೆಗೆ ಮೆತ್ತಿದ ಸೆಗಣಿಯು ಕೆಳಗೆ ಸೋರುತ್ತದೆ. ಅತೀ ಗಟ್ಟಿಯಾದರೆ ಗೋಡೆಗೆ ಅಂಟಿಕೊಳ್ಳದೇ ಉದುರಿಬೀಳುತ್ತದೆ.

ಹಾಗಾಗಿ ಸೆಗಣಿಯ ಮಿಶ್ರಣ ಗೋಡಗೆ ಸರಿಯಾಗಿ ಅಂಟಿಕೊಳ್ಳುವಂತೆ ಹದವಾಗಿ ಕಲಸಿಕೊಳ್ಳಬೇಕಾಗುವುದು. ಕೆಲವರು ಜಿಗುಟು ಹೆಚ್ಚಿಸಲು ಸೆಗಣಿಗೆ ಜೇಡಿಮಣ್ಣು ಮತ್ತು ಸುಣ್ಣವನ್ನು ಸಹಿತ ಮಿಶ್ರಣ ಮಾಡು ತ್ತಾರೆ. ಈ ರೀತಿ ಸೆಗಣಿಯ ಮಿಶ್ರಣವನ್ನು ಪಾತ್ರೆಯಲ್ಲಿ ಕಲಸಿ ಇಟ್ಟುಕೊಂಡು ಶೀಗಿ ಹಾಡು ಹಾಡುತ್ತ ಬರುವ ಗೌರಿಮಕ್ಕಳಿಗಾಗಿ ಕಾಯುತ್ತಿರುತ್ತಾರೆ.

ಗೌರಿಮಕ್ಕಳು ಹಾಡು ಹೇಳುತ್ತ ಮನೆಯಬಾಗಿಲಿಗೆ ಬಂದನಂತರ ಅವರನ್ನು ಆರತಿ ಕಳಸದ ಸಮೇತ ಆದರದಿಂದ ಬರಮಾಡಿಕೊಳ್ಳಲಾಗುವುದು. ಓಣಿಯ ಸ್ತ್ರೀಯರೆಲ್ಲ ಒಂದೆಡೆ ಸೇರಿ ಒಟ್ಟಾಗಿ ಶೀಗಿ ಹಾಡು ಹೇಳುತ್ತ ಮನೆಮನೆಗೆ ತೆರಳುತ್ತಾರೆ. ಅಲ್ಲಿಯ ಚಿತ್ರವಿನ್ಯಾಸ ರಚನೆಯು ಮುಗಿಯುವವರೆಗೆ ಶೀಗಿಹಾಡು ಹಾಡಿ ಮತ್ತೆ ಮುಂದಿನ ಮನೆಗೆ ತೆರಳುತ್ತಾರೆ. ಇವರನ್ನೇ ಗೌರಿಮಕ್ಕಳು ಇಲ್ಲವೇ ಶೀಗವ್ವನ ಮಕ್ಕಳೆಂದು ಕರೆಯುತ್ತಾರೆ.

ಗೌರಿಮಕ್ಕಳನ್ನು ಬರಮಾಡಿಕೊಂಡ ಆ ಮನೆಯ ಒಡತಿ ಗೌರಿಮಕ್ಕಳಿಗೆ ಹಾಡು ಹಾಡಲು ಕೇಳಿಕೊಳ್ಳುತ್ತಾಳೆ. ಪ್ರಾರಂಭದಲ್ಲಿ ಗಣೇಶನ ಸ್ತುತಿಯೊಂದಿಗೆ ಆರಂಭವಾದ ಶೀಗಿ ಹಾಡುಗಳಲ್ಲಿ ಶಿವ, ವಿಷ್ಣು, ಗೌರಿ, ಲಕ್ಷ್ಮೀ, ಗಂಗೆ, ಬ್ರಹ್ಮ, ಆಂಜನೇಯ ಮುಂತಾದ ದೇವತೆಗಳು, ದೇವತಾಪುರುಷರು, ನಿತ್ಯ ಘಟನೆಗಳು ಹೀಗೆ ಹತ್ತು ಹಲವು ವಿಷಯಗಳ ಹಾಡುಗಳನ್ನು ಹಾಡುತ್ತಾರೆ. ಹಾಡು ಪ್ರಾರಂಭವಾದ ನಂತರ ಆ ಮನೆಯ ಸ್ತ್ರೀಯರು ಚಿತ್ರವಿನ್ಯಾಸ ರೂಪಿಸಲು ತೊಡಗುತ್ತಾರೆ. ಇದರಲ್ಲಿ ಇಬ್ಬರು ಇಲ್ಲವೇ ನಾಲ್ಕು ಜನ ಸ್ತ್ರೀಯರು ಪಾಲ್ಗೊಳ್ಳುತ್ತಾರೆ.

ಗೌರಿಮಕ್ಕಳು ಒಂದು ಕಡೆಗೆ ಕುಳಿತು ಹಾಡಲು ಪ್ರಾರಂಭಿಸಿದ ನಂತರ ಆ ಮನೆಯ ಸ್ತ್ರೀಯರು ಚಿತ್ರರೂಪಿಸಲು ಪ್ರಾರಂಭಿಸುತ್ತಾರೆ. ಮೊದಲು ಒಬ್ಬಳು ಪಾತ್ರೆಯಲ್ಲಿ ಕಲಸಿದ ಸೆಗಣಿಯ ಮಿಶ್ರಣವನ್ನು ತೆಗೆದುಕೊಂಡು ಚುಕ್ಕಿ, ಚಂದ್ರ, ಗಂಗಿ, ಗೌರಿ, ಬಾರಂಭಾವಿ, ಬಾಳೆಗಿಡ ಮುಂತಾದ ಚಿತ್ರಗಳನ್ನು ರೂಪಿಸುತ್ತ ಸಾಗುತ್ತಾಳೆ. ಇವು ಸೆಗಣಿಯನ್ನು ಲೇಪಿಸಿದ ಉಬ್ಬುಶಿಲ್ಪ ಮಾದರಿಯಲ್ಲಿ ಕಂಗೊಳಿಸುತ್ತವೆ.

ಇವು ಇನ್ನೂ ಹಸಿ ಇರುವಾಗಲೇ ಇನ್ನೊಬ್ಬಳು ಈ ಸೆಗಣಿಯ ಶಿಲ್ಪದ ಮೇಲೆ ಕುಕ್ಕೇ ಹೂ ಮತ್ತು ಕಾರಾಳ ಹೂಗಳನ್ನು ಚುಚ್ಚುತ್ತ ಹೋಗುತ್ತಾಳೆ. ಕೆಲವರು ಜಾಲಿಯ ಹೂ ಮತ್ತು ಹೊನ್ನಂಬರಿ ಹೂಗಳನ್ನೂ ಸಹ ಚುಚ್ಚಿ ಅಲಂಕರಿಸುತ್ತಾರೆ. ಚಿತ್ರರಚನೆ ಮುಗಿದ ನಂತರ ಅವುಗಳಿಗೆ ಚೌರಸದಂತೆ ಹೊರ ಅಂಚನ್ನು ರೂಪಿಸುತ್ತಾರೆ. ಇದರಿಂದಾಗಿ ಸೆಗಣಿಯ ಶಿಲ್ಪಗಳು ಒಂದು ಚೌಕದೊಳಗೆ ಇದ್ದಂತೆ ಕಂಡುಬರುತ್ತವೆ. ಬೀದರ ಜಿಲ್ಲೆಯ ಕೆಲವು ಭಾಗಗಳಲ್ಲಿ ಸೆಗಣಿಯಿಂದ ಈ ರೀತಿಯ ಶಿಲ್ಪವಿನ್ಯಾಸ ರೂಪಿಸದೇ, ದ್ವಾರಬಾಗಿಲ ಮುಂದೆ ಸಿಮೆಂಟಿನಿಂದ ಇಲ್ಲವೇ ಗಟ್ಟಿಯಾದ ಕೆಸರಿನಿಂದ ಮಾಡಿಟ್ಟ ತ್ರಿಕೋನ ಆಕೃತಿಯ ತೂತು ಗಳಲ್ಲಿ ಹೂಗಳನ್ನು ಸಿಕ್ಕಿಸಿ (ಚುಚ್ಚಿ) ಶೀಗಿ ಆಡುತ್ತಾರೆ.

ಈ ಉಬ್ಬುಶಿಲ್ಪ ರಚನೆ ಮುಗಿದು ಹೂಗಳನ್ನು ಚುಚ್ಚಿ ಅಲಂಕರಿಸಿದ ನಂತರ ವಿಭೂತಿ, ಕುಂಕುಮ ಲೇಪಿಸಿ ಊದಿನಕಡ್ಡಿ, ಧೂಪ, ದೀಪಗಳಿಂದ ಪೂಜೆ ಮಾಡುತ್ತಾರೆ. ಟೆಂಗಿನಕಾಯಿ ಒಡೆದು ಅದರ ಕೊಬ್ಬರಿಯನ್ನು ಚುರಮರಿಯಲ್ಲಿ ಹಾಕಿ ನೈವೇದ್ಯ ಮಾಡಿ ಪ್ರಸಾದವಾಗಿ ಅಲ್ಲಿದ್ದ ಎಲ್ಲ ಜನರಿಗೂ ಹಂಚುತ್ತಾರೆ. ಇದುವರೆಗೂ ಹಾಡು ಹಾಡಿದ ಗೌರಿಮಕ್ಕಳು ಪ್ರಸಾದ ಸ್ವೀಕರಿಸಿ ಆ ಮನೆಯ ಚಿತ್ರವಿನ್ಯಾಸದ ಬಗ್ಗೆ ಮಾತನಾಡುತ್ತ ಮುಂದಿನ ಮನೆಗೆ ತೆರಳುತ್ತಾರೆ.

### ಬ. ಬಣ್ಣಗಳಿಂದ ಚಿತ್ರ ಬರೆಯುವ ವಿಧಾನ

ಈ ಮೊದಲು ಆರು ದಿನಗಳು ಸಾಯಂಕಾಲ ಚಿತ್ರಗಳನ್ನು ಸೆಗಣಿಯಿಂದ ರೂಪಿಸಿದರೆ, ಏಳನೆಯ ದಿನ ಅಂದರೆ ಹುಣ್ಣಿಮೆಯ ದಿನ ಹಗಲು ಹೊತ್ತಿನಲ್ಲಿ ಬಣ್ಣದಿಂದ ಚಿತ್ರಗಳನ್ನು ಬರೆಯುತ್ತಾರೆ. ಇಲ್ಲಿಯೂ ಮೊದಲೇ ಸಿದ್ಧಮಾಡಿಟ್ಟುಕೊಂಡಿರುವ ಭಿತ್ತಿಯ ಮೇಲೆ ಗೌರಿಮಕ್ಕಳು ಹಾಡು ಹೇಳುವ ಸಂದರ್ಭದಲ್ಲಿ ಚಿತ್ರ ಬರೆಯಲಾಗುತ್ತದೆ.

ಹುರಿಮಂಜಿನಿಂದ ಕೆಂಪುಬಣ್ಣ, ಬಂಗಾಲಿ ಗಿಡದ ಕಾಯಿ ಇಲ್ಲವೇ ಒಂದು ರೀತಿಯ ಅಣಬೆ ಸಸ್ಯದಿಂದ ಹಳದಿಬಣ್ಣ, ಹೂಲಿಗಿಡದಿಂದ ನೀಲಿಬಣ್ಣ, ಜಾಲಿಗಿಡದಿಂದ ನೇರಳೆಬಣ್ಣ ಹೀಗೆ ತಮಗೆ ಬೇಕಾದ ಬೇರೆಬೇರೆ ಬಣ್ಣಗಳನ್ನು ಮೊದಲೇ ತಯಾರಿಸಿ ಇಟ್ಟುಕೊಂಡಿರುತ್ತಾರೆ. ಈ ಬಣ್ಣಗಳನ್ನು ತೆಂಗಿನಚಿಪ್ಪು ಇಲ್ಲವೇ ಮಣ್ಣಿನ ಮುಚ್ಚಳಗಳಲ್ಲಿ ಕಲಸಿಕೊಂಡು ತಾವೇ ತಯಾರಿಸಿಕೊಂಡ ಕುಂಚಗಳಿಂದ ಚಿತ್ರರಚನೆ ಮಾಡುತ್ತಾರೆ.

ಈ ಮೊದಲು ಪ್ರತಿದಿನ ಒಂದು ಅಥವಾ ಎರಡು ಇಲ್ಲವೇ ಮೂರು ಚಿತ್ರಗಳನ್ನು ರಚಿಸಿದರೆ, ಹುಣ್ಣಿಮೆಯ ದಿವಸ ಹಿಂದಿನ ದಿನ ರಚಿಸಲಾಗಿದ್ದ ಎಲ್ಲ ಚಿತ್ರಗಳನ್ನು ಒಟ್ಟಿಗೆ ರಚಿಸುತ್ತಾರೆ. ಗೌರಿಮಕ್ಕಳು ಹಾಡು ಹೇಳುತ್ತಿದ್ದಂತೆ ಮನೆಯ ಹೆಣ್ಣುಮಕ್ಕಳು ಕುಂಚಗಳನ್ನು ಬಣ್ಣದಲ್ಲಿ ಅದ್ದಿ ಭಿತ್ತಿಯ ಮೇಲೆ ನೇರವಾಗಿ ಚಿತ್ರರಚನೆಗೆ ತೊಡಗುತ್ತಾರೆ. ಅಂದರೆ ಮೊದಲಿಗೆ ಇದ್ದಿಲು ಇಲ್ಲವೇ ಸೀಸುಕಡ್ಡಿಯಂತಹ ಸಾಧನದಿಂದ ಪೂರ್ವಭಾವಿಯಾಗಿ

ಕರಡು ಚಿತ್ರಗಳನ್ನು ರಚಿಸಿಕೊಳ್ಳುವುದಿಲ್ಲ. ಕುಂಚದಿಂದ ಒಮ್ಮೆಲೇ ವರ್ಣಚಿತ್ರ ರಚನೆ ಮಾಡುತ್ತಾರೆ.

ಸಾಮಾನ್ಯವಾಗಿ ಈ ಎಲ್ಲ ವರ್ಣಚಿತ್ರಗಳು ರೇಖಾ ಪ್ರಧಾನವಾಗಿರುತ್ತವೆ. ಇಲ್ಲಿಯೂ ಚಿತ್ರಗಳಿಗೆ ಚೌಕಟ್ಟಿನಂತೆ ಹೊರರೇಖೆ ಎಳೆಯುತ್ತಾರೆ. ಅಂದರೆ ಒಂದೇ ಚೌಕದಲ್ಲಿ ಎಲ್ಲ ವರ್ಣಚಿತ್ರಗಳು ಇರುವಂತೆ ಮಾಡುತ್ತಾರೆ. ಬೇರೆಬೇರೆ ವರ್ಣಗಳನ್ನು ಬಳಸಿ ರಚಿಸಲಾದ ಚಿತ್ರಗಳು ಮನ ಸೆಳೆಯುವಂತೆ ಕಂಡುಬರುತ್ತವೆ.

ಚಿತ್ರರಚನೆ ಮುಗಿದ ನಂತರ ಇಲ್ಲಿಯೂ ಅವುಗಳನ್ನು ಪೂಜಿಸಿ ಕಾಯಿ ಒಡೆದು ನೈವೇದ್ಯ ಮಾಡಲಾಗುತ್ತದೆ. ಆದರೆ ಈ ದಿನ (ಹುಣ್ಣಿಮೆ) ಹೋಳಿಗೆ, ಹುಗ್ಗಿ, ಕಡಬು, ಪಾಯಸ, ತುಪ್ಪ, ಅನ್ನ, ಕಾಯಿಪಲ್ಲೆ ಮುಂತಾದ ವಿವಿಧ ಬಗೆಯ ಭಕ್ಷಗಳನ್ನು ನೈವೇದ್ಯ ಮಾಡುತ್ತಾರೆ. ಪೂಜೆಯ ನಂತರ ಕೆಲವರು ಫಳಾರ ವಿತರಿಸಿದರೆ ಮತ್ತೆ ಕೆಲವರು ಊಟ ಹಾಕಿಸುತ್ತಾರೆ. ಈ ಸಂದರ್ಭದಲ್ಲಿ ಬಹಳ ಹೊತ್ತಿನವರೆಗೆ ಶೀಗಿಹಾಡು ಹಾಡುತ್ತಾರೆ.

### ೬. ವಸ್ತು ವಿಷಯಗಳು

ಹೊರಗೋಡೆಯಲ್ಲಿ ಬಾಗಿಲಿನ ಪಕ್ಕದಲ್ಲಿ ರಚನೆ ಮಾಡುವ ಈ ಶೀಗಿ ಚಿತ್ರಕಲೆಯಲ್ಲಿ ವೈವಿಧ್ಯ ವಸ್ತುವಿಷಯಗಳಿರುತ್ತವೆ. ಒಂದೊಂದು ದಿನ ಒಂದೊಂದು ರೀತಿಯ ವಸ್ತುವಿಷಯ ಗಳಿಗೆ ಸಂಬಂಧಿಸಿದ ಚಿತ್ರ ರಚನೆ ಮಾಡಲಾಗುತ್ತದೆ.

ಮೊದಲನೆಯದಿನ ಸೂರ್ಯ, ಚಂದ್ರ, ಚುಕ್ಕೆಗಳನ್ನು ರಚಿಸುತ್ತಾರೆ.[೮] ಭೂಮಿಯ ಮೇಲಿನ ಜೀವಕೋಟಿಗೆ ಮೊದಲು ಸೂರ್ಯ, ಚಂದ್ರ, ನಕ್ಷತ್ರಗಳೇ ಹುಟ್ಟಿಕೊಂಡವು. ಹಾಗಾಗಿ ಇವುಗಳನ್ನು ಮೊದಲಿಗೆ ಬರೆಯುತ್ತಾರೆ. ನಿತ್ಯ ಬದುಕಿನ ಹಗಲು-ರಾತ್ರಿ, ಕತ್ತಲು-ಬೆಳಕು, ಸುಖ-ದುಃಖ, ಆನಂದ, ಸೌಂದರ್ಯಗಳನ್ನು ಇವು ಪ್ರತಿನಿಧಿಸುತ್ತಿದ್ದು, ಅದರ ಸಂಕೇತವಾಗಿ ಈ ಚಿತ್ರಗಳ ರಚನೆಯು ಮೊದಲದಿನ ಮಾಡುವುದು ಎಂಬುದು ಗ್ರಾಮೀಣರ ನಂಬಿಕೆ. ಉತ್ತರ ಕರ್ನಾಟಕ ಭಾಗದಲ್ಲಿ ಬೆಳದಿಂಗಳು ಆಚರಣೆಯಲ್ಲಿಯೂ ಸಹಿತ ಮೊದಲ ದಿನ ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆಯುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಎರಡನೆಯ ದಿನ ಗಂಗಿ-ಗೌರಿಯರ ಚಿತ್ರ ಬರೆಯಲಾಗುತ್ತದೆ.[೯] ಗಂಗಿ-ಗೌರಿಯರು ಶಿವನ ಪತ್ನಿಯರು ಗೌರಿಯು ಮಂಗಳವನ್ನುಂಟುಮಾಡಿ ನಮ್ಮೆಲ್ಲರನ್ನು ಕಾಪಾಡುತ್ತಾಳೆ. ಗಂಗಿ ಎಂದರೆ ನೀರು ಇಲ್ಲವೇ ಜಲದ ಪ್ರತೀಕ. ಮಾನವ ಜೀವನಕ್ಕೆ ನೀರು ಅತ್ಯವಶ್ಯವಾಗಿ ಬೇಕು. ನೀರಿನ ದೇವತೆ ಗಂಗಾಮಾತೆ. ಈ ಗಂಗಾಮಾತೆಯಿಂದಲೇ ಜೀವನ ಸ್ವಚ್ಛ ಹಾಗೂ ನಿರ್ಮಲ. ಗಂಗೆಯಂತೆ ನಮ್ಮ ಜೀವನವೂ ಸದಾ ನಿರ್ಮಲವಾಗಿ ಜುಳುಜುಳು ನಾದ ದೊಂದಿಗೆ ಪ್ರವಹಿಸುತ್ತಿರಲಿ ಎನ್ನುವ ನಂಬುಗೆಯಿಂದ ಎರಡನೆಯ ದಿನ ಗಂಗಿ ಗೌರಿಯ ಚಿತ್ರ ಬರೆಯುತ್ತಾರೆ.

ಮೂರನೆಯ ದಿನ ಚೌಕಾಕಾರದ ಬಾರಂಭಾವಿ(ಬಾವಿ), ಬಾಳೆಗಿಡ ಮತ್ತು ಕುಂಬಳ ಹೂವಿನ ಚಿತ್ರಗಳನ್ನು ರಚಿಸುತ್ತಾರೆ. ಮತ್ತು ನಾಲ್ಕನೆಯ ದಿವಸ ಕಬ್ಬಿನಗಳು (ಕಬ್ಬಿನ ಜಲ್ಲೆ), ಅದನ್ನು ಕಾಯಲು ಒಬ್ಬ ಮನುಷ್ಯನ ಚಿತ್ರ ಬರೆಯುತ್ತಾರೆ. ಈ ಚಿತ್ರಗಳ ನಂಬಿಕೆ ಎಂದರೆ ಆದಿಮಾನವ ಕ್ರಮೇಣ ಬೇಸಾಯ ಪ್ರಾರಂಭಿಸಿ ಉತ್ತಮ ಜೀವನ ಸಾಗಿಸಲು ತೊಡಗಿದ. ಇವನ ಜೀವನಕ್ಕೆ ನೀರಿನಬಾವಿ, ಹೊಲ, ಬೆಳೆ ಇವೇ ದೇವರು ಇವುಗಳನ್ನು ಸದಾ ಶ್ರದ್ಧೆಯಿಂದ ದುಡಿಯುತ್ತಾ ಹಸನು ಮಾಡುತ್ತ ಇರಬೇಕೆಂದು ಈ ಚಿತ್ರಗಳನ್ನು ಬಿಡಿಸುವ ಮೂಲಕ ಆರಾಧಿಸುವದಾಗಿದೆ.

ಮೂರು ಮತ್ತು ನಾಲ್ಕನೆಯ ದಿನ ಇದೇ ಚಿತ್ರ ಬರೆಯಬೇಕೆಂಬ ಕಡ್ಡಾಯ ನಿಯಮ ವಿಲ್ಲ. ಮೂರನೆಯದಿನದ ಚಿತ್ರ ನಾಲ್ಕನೆಯದಿನಕ್ಕೂ, ನಾಲ್ಕನೆಯದಿನದ ಚಿತ್ರ ಮೂರನೆಯ ದಿನಕ್ಕೂ ವ್ಯತ್ಯಾಸಗೊಳ್ಳಬಹುದಾಗಿದೆ ಅಥವಾ ಬೇರೆ ಚಿತ್ರಗಳನ್ನೂ ಬರೆಯಬಹುದು. ಆದರೆ ಒಂದು, ಎರಡು ಮತ್ತು ಆರನೆಯ ದಿವಸ ಇಂತಹ ಚಿತ್ರಗಳನ್ನೇ ಬರೆಯಬೇಕೆಂಬ ನಿಯಮವಿದೆ.

ಐದನೆಯ ದಿನ ಹನುಮಂತ ದೇವರು, ಹೂಗಳು, ಅಡಕಲಗಡಗಿ (ಕರಬನ ಗಡಗಿ), ಛರಚೀಲ (ವಸ್ತುಗಳನ್ನಿಡುವ ಚೀಲ) ಇವುಗಳ ಚಿತ್ರಗಳನ್ನು ರಚಿಸುತ್ತಾರೆ. ಜನಪದರ ನಂಬಿಕೆ ಯಂತೆ ಹನುಮಂತದೇವರು ಒಬ್ಬ ಶಕ್ತಿವಂತ, ಚಾರಿತ್ರ್ಯವಂತ ಹಾಗೂ ಚಿರಂಜೀವಿ. ಇವನಂತೆಯೇ ನಮ್ಮಲ್ಲಿಯೂ ಶಕ್ತಿ ಚಾರಿತ್ರ್ಯ ತುಂಬಿರಲಿ. ಈ ಜೀವನ ಕ್ಷಣಿಕವಾದರೂ ಅದು ಚಿರಂಜೀವಿಯಂತೆ ಅಮರವಾಗಲಿ ಎಂಬ ಭಾವನೆ ಕಾಣುತ್ತೇವೆ. ಅಡಕಲಗಡಗಿ ಮತ್ತು ಛರಚೀಲ ಈ ಚಿತ್ರಗಳು ಮಾನವ ವ್ಯವಸ್ಥಿತ ಜೀವನ ಪ್ರಾರಂಭಿಸಿ ತನಗೆ ಬೇಕಾಗುವ ಅಗತ್ಯವಸ್ತುಗಳನ್ನು ಇವುಗಳಲ್ಲಿ ಶಿಸ್ತಿನಿಂದ ಇಟ್ಟುಕೊಳ್ಳುವುದಾಗಿದೆ.[೧೦]

ಇವುಗಳೇ ಇಂದಿನ ಟಿಫನ್ ಬಾಕ್ಸ್, ಲೆಟರ್ ಬಾಕ್ಸ್‌ಗಳ ರೂಪಾಂತರಗಳಾಗಿವೆ. ಆರನೆಯ ದಿನ ಏಳುಸುತ್ತಿನ ಕ್ಯಾಟಿ(ಕೋಟೆ)ಯ ಚಿತ್ರವನ್ನು ಕಡ್ಡಾಯವಾಗಿ ರಚಿಸುತ್ತಾರೆ. ಇಲ್ಲಿ ಮಹಾಭಾರತದ ಚಕ್ರವ್ಯೂಹದ ಕಲ್ಪನೆ ಅಡಗಿದೆ. ದೇವರು (ಬಸವ) ಏಳುಸುತ್ತಿನ ಕೋಟೆಯಲ್ಲಿ ಇದ್ದಾನೆ. ಅವನನ್ನು ಒಲಿಸಿಕೊಂಡು ಪಾರಮಾರ್ಥ ಸಾಧಿಸಬೇಕಾದರೆ, ಈ ಏಳುಸುತ್ತಿನ ಕೋಟೆಯನ್ನು ದಾಟಿಕೊಂಡು ಹೋಗಬೇಕು. ಇದು ಕಠಿಣ. ಆದರೂ ಪ್ರಯತ್ನಿಸಿ ಫಲ ಪಡೆಯಬೇಕಾಗಿದೆ. ಅಂದರೆ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಕೋಟೆಯ ಹಾಗೆ ಸುತ್ತಿಕೊಂಡ ಭವಬಂಧನಗಳನ್ನು ಕಳಚಿಕೊಳ್ಳಬೇಕು ಎಂಬ ಕಲ್ಪನೆಯ ಸಂಕೇತವಾಗಿ ಇದನ್ನು ಬರೆಯುತ್ತಾರೆ.

ಏಳನೆಯ ದಿನ ಹಗಲು ಹೊತ್ತಿನಲ್ಲಿ ಬಣ್ಣಗಳಿಂದ ಚಿತ್ರಗಳನ್ನು ರಚಿಸುತ್ತಾರೆ. ಈ ಹಿಂದಿನ ಆರೂ ದಿನಗಳಲ್ಲಿ ಸೆಗಣಿಯಿಂದ ರೂಪಿಸಿದ ಎಲ್ಲಾ ಚಿತ್ರವಿನ್ಯಾಸಗಳನ್ನು ಏಳನೆಯ

ದಿನ ಒಟ್ಟಾಗಿ ರಚಿಸುತ್ತಾರೆ. ಚುಕ್ಕಿ, ಚಂದ್ರ, ಸೂರ್ಯ, ಗಂಗಿ, ಗೌರಿ, ಭಾರಂಬಾವಿ, ಬಾಳೆ ಗಿಡ, ಕಬ್ಬಿನಗಳು, ಕುಂಬಳಹೂ, ಮನುಷ್ಯ, ಹನುಮಂತ ದೇವರು, ಅಡಕಲಗಡಗಿ, ಛರಚೀಲ, ಏಳುಸುತ್ತಿನ ಕೋಟೆ ಹೀಗೆ ಎಲ್ಲ ಚಿತ್ರಗಳನ್ನೂ ಒಟ್ಟಾಗಿ ರಚಿಸುವರು.

ಒಟ್ಟಿಗೆ ಚಿತ್ರಿಸುವುದರಲ್ಲಿ ಶಕ್ತಿ ಇದೆ. ಸುಖ ಇದೆ. ಹಾಗೂ ಸೌಂದರ್ಯ ಇಮ್ಮಡಿಸುತ್ತದೆ. ಹೀಗೆ ಜೀವನವೂ ಸಮೂಹವಾಗಿ ಎಂದೆಂದೂ ಕೂಡಿಕೊಂಡು ಒಟ್ಟಿಗಿರಲೆಂಬ ಅಪೇಕ್ಷೆ ಇದರಲ್ಲಿ ಅಡಗಿದೆ. ಉತ್ತರ ಕರ್ನಾಟಕದ ಬೆಳದಿಂಗಳು ಆಚರಣೆಯಲ್ಲಿಯೂ ಸಹಿತ ಮೊದಲಿನ ನಾಲ್ಕು ದಿನ ಸಂಜೆಹೊತ್ತು ಚಿತ್ರಗಳನ್ನು ರಚಿಸಿದರೆ, ಐದನೆಯದಿನ, ಹುಣ್ಣಿಮೆಯಂದು ಹಗಲು ಹೊತ್ತಿನಲ್ಲಿ ತೇರಿನಚಿತ್ರ ರಚನೆ ಮಾಡುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

## ೨. ಒಳಗೋಡೆಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

ಶೀಗಿ ಆಚರಣೆಯ ಸಂದರ್ಭದಲ್ಲಿ ಮನೆಯ ಒಳಗೋಡೆಯಲ್ಲಿ ಚಿತ್ರರಚಿಸುವ ಸಂಪ್ರದಾಯವು ಉತ್ತರಕರ್ನಾಟಕದ ಬಾಗಲಕೋಟ, ಬಿಜಾಪುರ, ಬೆಳಗಾಂವ, ಧಾರವಾಡ, ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಶೀಗಿಹುಣ್ಣಿಮೆ ಇನ್ನೂ ಏಳುದಿನ ಇರುವಾಗ ಚಿತ್ರರಚನೆ ಪ್ರಾರಂಭವಾಗುತ್ತದೆ.

ಇಲ್ಲಿನ ಚಿತ್ರರಚನೆಯ ಸಂದರ್ಭ ಹೀಗಿದೆ, ಮೊದಲನೆಯ ದಿನ ಒಂದು, ಎರಡನೆಯ ದಿನ ಎರಡು, ಮೂರನೆಯದಿನ ಮೂರು, ನಾಲ್ಕನೆಯದಿನ ನಾಲ್ಕು, ಐದನೆಯ ದಿನ ಐದು, ಆರನೆಯದಿನ ಆರು ಮತ್ತು ಏಳನೆಯದಿನ ಏಳು ಶೀಗಿ ಪ್ರತಿಮೆಗಳನ್ನು ಜೇಡಿಮಣ್ಣಿನಿಂದ ಮಾಡಲಾಗುತ್ತದೆ. ಅವುಗಳನ್ನು ಮನೆಯ ಒಳಭಾಗದ ಮಾಡಿನಲ್ಲಿ (ಗೂಡು) ಇಟ್ಟು ಪೂಜಿಸಲಾಗುತ್ತದೆ.

ಈ ಸಂದರ್ಭದಲ್ಲಿ ಶೀಗಿ ಪ್ರತಿಮೆಗಳನ್ನು ಇಟ್ಟು ಪೂಜಿಸುವ ಮಾಡನ್ನು ಒಳಗೆ ಮತ್ತು ಹೊರಭಾಗದ ಸುತ್ತಲೂ ಚಿತ್ರ ಬರೆದು ಅಲಂಕರಿಸುತ್ತಾರೆ. ಇಲ್ಲಿಯೂ ಸಹಿತ ಒಂದೊಂದು ದಿನ ಒಂದೊಂದು ಬಗೆಯ ಚಿತ್ರರಚನೆ ಇರುತ್ತದೆ.

ಪ್ರತಿದಿನವೂ ಹೊಸದಾಗಿ ಸುಣ್ಣ ಸಾರಿಸಿ, ಚಿತ್ರ ಬರೆದು, ಮಾಡನ್ನು ಅಲಂಕರಿಸಲಾಗುತ್ತದೆ. ನಂತರ ಶೀಗಿ ಪ್ರತಿಮೆಗಳನ್ನು ಮಾಡಿನಲ್ಲಿ ಇಟ್ಟು ಪೂಜಿಸುವ ಸಂದರ್ಭದಲ್ಲಿ ಶೀಗಿ ಹಾಡುಗಳನ್ನು ಹಾಡಲಾಗುತ್ತದೆ. ಈ ಕಾರ್ಯದಲ್ಲಿ ಮನೆಯ ಹೆಂಗಸರು ಮಾತ್ರ ವಲ್ಲದೇ ಓಣಿಯ ಹೆಣ್ಣುಮಕ್ಕಳೆಲ್ಲ ಪಾಲ್ಗೊಳ್ಳುತ್ತಾರೆ. ಕೊನೆಯಲ್ಲಿ ಎಲ್ಲರೂ ಆರತಿ ಮಾಡಿ ಪ್ರಸಾದ ಸ್ವೀಕರಿಸುತ್ತಾರೆ. ಈ ರೀತಿಯ ಶೀಗಿಯನ್ನು ಇಡುವುದು ಕೆಲವೇ ಮನೆತನಗಳಲ್ಲಿ ಕಂಡು ಬರುತ್ತದೆ. ಊರಿನ ಗೌಡರು, ದೇಸಾಯರು, ಸ್ವಾಮಿಗಳು, ಪ್ರತಿಷ್ಠಿತರು, ಕೆಲವು ಜನ

ಕಂಬಾರರು, ಕುಂಬಾರರು ಇಲ್ಲವೇ ಅಕ್ಕಸಾಲಿಗರ ಮನೆಗಳಲ್ಲಿ ಶೀಗಿ ಇಡುವ ಸಂಪ್ರದಾಯ ಇದೆ. ಆದರೆ ಇತ್ತೀಚೆಗೆ ತೀರ ಅಪರೂಪವಾಗಿ ಈ ಸಂಪ್ರದಾಯ ಅಲ್ಲಲ್ಲಿ ಮಾತ್ರ ಕಂಡು ಬಂದು ನಶಿಸುವ ಹಂತದಲ್ಲಿದೆ.

ಏಳು ದಿನಗಳವರೆಗೆ ಕಡ್ಡಾಯವಾಗಿ ನಡೆಯುವ ಈ ಮಹಿಳಾ ಪ್ರಧಾನ ಚಿತ್ರಕಲೆಯನ್ನು ಈ ಕೆಳಗಿನಂತೆ ವಿಂಗಡಿಸಿ ವಿವರಿಸಬಹುದು.

೧. ಸ್ವರೂಪ

೨. ಮಾಧ್ಯಮ

೩. ಪರಿಕರಗಳು

೪. ಸಿದ್ಧತಾ ಹಂತ

೫. ಚಿತ್ರರಚನಾ ವಿಧಾನ

೬. ವಸ್ತು ವಿಷಯಗಳು

**೧. ಸ್ವರೂಪ :** ಮನೆಯ ಒಳಗೋಡೆಯ ಮೇಲೆ ಚಿತ್ರಿಸುವ ಈ ಚಿತ್ರಕಲೆ ದ್ವಿಆಯಾಮ ವನ್ನು ಹೊಂದಿದೆ. ಮನೆಯ ಒಳಗಿರುವ ಮಾಡಿನ ಒಳಭಾಗ ಮತ್ತು ಮಾಡಿನ ಹೊರಭಾಗದ ಸುತ್ತಲೂ ಚಿತ್ರರಚನೆ ಮಾಡಲಾಗುತ್ತದೆ. ಕೆಲ ಆಕಾರಗಳು ಚಿಕ್ಕವು ಇನ್ನೂ ಕೆಲವು ದೊಡ್ಡವು ಹೀಗೆ ರಚನಾಕಾರರ ತಕ್ಷಣದ ಭಾವನೆಗೆ ತಕ್ಕಂತೆ ಈ ಚಿತ್ರಗಳು ರೂಪುಗೊಂಡಿರುತ್ತವೆ. ಹಾಗಾಗಿ ಇವುಗಳ ನಿರ್ದಿಷ್ಟ ಸ್ವರೂಪ ವಿವರಿಸುವುದು ಕಷ್ಟ.

**೨. ಮಾಧ್ಯಮ :** ಮನೆಯ ಒಳಭಾಗದ ಗೋಡೆಯಲ್ಲಿನ ಮಾಡಿನ ಸುತ್ತಲಿನ ಭಾಗ ಮತ್ತು ಒಳಭಾಗದಲ್ಲಿ ಚಿತ್ರಿಸಲಾಗುತ್ತದೆ. ಈ ಚಿತ್ರಗಳನ್ನು ಸುಣ್ಣ, ಕೆಮ್ಮಣ್ಣು (ಹುರಿ ಮಂಜು), ಹಳದಿ ಜೇಡಿಮಣ್ಣು, ಅರಿಸಿನ ಮುಂತಾದವುಗಳಿಂದ ಗೋಡೆ ಮೇಲೆ ರಚಿಸುತ್ತಾರೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ದೊರೆಯುವ ಸಿದ್ಧ ವರ್ಣಗಳಿಂದಲೂ ಈ ಚಿತ್ರಗಳನ್ನು ರಚಿಸಲಾಗುತ್ತಿದೆ.

**೩. ಪರಿಕರಗಳು :** ಈ ಚಿತ್ರರಚನೆಯಲ್ಲಿ ಸುಣ್ಣ, ಕೆಮ್ಮಣ್ಣು (ಹುರಿಮಂಜು), ಹಳದಿ ಜೇಡಿಮಣ್ಣು, ಸಗಣಿ, ಬಣ್ಣದ ಪುಡಿಗಳು, ಅರಿಸಿನ, ಕುಂಚಗಳು, ಬಣ್ಣ ಕಲಸುವ ಪಾತ್ರೆಗಳು ಮುಂತಾದ ಪರಿಕರಗಳು ಬೇಕಾಗುತ್ತವೆ.

**೪. ಸಿದ್ಧತಾ ಹಂತ :** ಶೀಗಿ ಮೂರ್ತಿಯನ್ನು ಇಟ್ಟು ಪೂಜಿಸುವ ಮಾಡನ್ನು ಪ್ರತಿದಿನವೂ ಸಾರಿಸಿ, ಚಿತ್ರಬರೆದು ಅಲಂಕರಿಸಲಾಗುತ್ತದೆ. ಅದರ ಸಿದ್ಧತಾ ವಿಧಾನ ಅತ್ಯಂತ ಸರಳವಾಗಿದೆ. ಮೊದಲಿಗೆ ಮಾಡು ಮತ್ತು ಅದರ ಸುತ್ತಲಿನ ಸ್ಥಳವನ್ನು ಧೂಳಿನಿಂದ ಸ್ವಚ್ಛಗೊಳಿಸಿ, ಸುಣ್ಣ ಇಲ್ಲವೇ ಕೆಮ್ಮಣ್ಣು ಅಥವಾ ಹಳದಿ ಜೇಡಿಮಣ್ಣಿನಿಂದ ಸಾರಿಸಲಾಗುತ್ತದೆ.

೫. ಚಿತ್ರರಚನಾ ವಿಧಾನ : ಸುಣ್ಣ ಅಥವಾ ಕೆಮ್ಮಣ್ಣು ಸಾರಿಸಿದ ಗೋಡೆಯು ಒಣಗಿದ ನಂತರ ಚಿತ್ರರಚನೆ ಮಾಡುತ್ತಾರೆ. ಸುಣ್ಣದ ಗೋಡೆಯ ಮೇಲೆ ಕೆಮ್ಮಣ್ಣು ಅಥವಾ ಬಣ್ಣದ ಪುಡಿಗಳನ್ನು ಅಂಟುದ್ರಾವಕದಲ್ಲಿ ಕಲಸಿ ಅವುಗಳಿಂದ ಚಿತ್ರ ರಚಿಸುತ್ತಾರೆ. ಹಾಗೆಯೇ ಕೆಮ್ಮಣ್ಣಿನ ಗೋಡೆಯಾಗಿದ್ದರೆ ಅದರ ಮೇಲೆ ಸುಣ್ಣ ಇಲ್ಲವೇ ಹಳದಿ ಜೇಡಿಮಣ್ಣಿನಿಂದ ಚಿತ್ರಿಸಲಾಗುತ್ತದೆ.

ಕೆಮ್ಮಣ್ಣು, ಸುಣ್ಣ, ಇಲ್ಲವೇ ಬಣ್ಣದ ಪುಡಿಗಳನ್ನು ಟೆಂಗಿನಚಿಪ್ಪು ಇಲ್ಲವೆ ಮಣ್ಣಿನ ಪಾತ್ರೆಗಳಲ್ಲಿ ಹದವಾಗಿ ಕಲಸಿಕೊಂಡು ಸ್ವಲ್ಪ ಹೊತ್ತು ಬಿಡುತ್ತಾರೆ. ಆಮೇಲೆ ಟೆಂಗಿನ ನಾರು, ಹುಲ್ಲಿನಗರಿಕೆ, ಗಿಡದ ಟೊಂಗೆ ಇವುಗಳಿಂದ ಮಾಡಿದ ಕುಂಚಗಳನ್ನು ಬಳಸಿಕೊಂಡು ಚಿತ್ರಿಸುತ್ತಾರೆ.

ಮೊದಲಿಗೆ ಮಾಡಿನ ಒಳಭಾಗದಲ್ಲಿ ಚಿತ್ರಿಸಿ, ನಂತರ ಹೊರಭಾಗದಲ್ಲಿ ಚಿತ್ರಿಸುತ್ತಾರೆ. ಮಹಿಳೆಯರು ಸಾಯಂಕಾಲದ ಹೊತ್ತಿನಲ್ಲಿ ಈ ಚಿತ್ರಗಳನ್ನು ರಚನೆ ಮಾಡು ತ್ತಾರೆ. ಕುಂಚ ಗಳಿಂದ ಅಥವಾ ಬೆರಳಿನಿಂದ ಸಹಜವಾಗಿ ಚಿತ್ರಿಸುವವರಾದರೂ ಕೆಲವು ಸಂದರ್ಭದಲ್ಲಿ ನೇರವಾದ ರೇಖೆ ಎಳೆಯಲು ಅಳತೆಪಟ್ಟಿಯಂತಹ ಸಾಧನಗಳನ್ನು ಬಳಸುತ್ತಾರೆ. ಸ್ತ್ರೀಯರ ಸಹಜ ಅಭಿವ್ಯಕ್ತಿಯಿಂದ ಮೂಡಿಬಂದ ಈ ಚಿತ್ರ ಕೃತಿಗಳು ಮೋಹಕತೆಯಿಂದ ಕೂಡಿರುತ್ತವೆ.

೬. ವಸ್ತು ವಿಷಯಗಳು : ಒಳಗೋಡೆಯಲ್ಲಿ ಚಿತ್ರಿಸುವ ಶೀಗಿ ಚಿತ್ರಕಲೆಯಲ್ಲಿಯೂ ಒಂದೊಂದು ದಿನ ಒಂದೊಂದು ವಿಷಯಕ್ಕೆ ಸಂಬಂಧಿಸಿದಂತೆ ಏಳುದಿನಗಳು ಚಿತ್ರ ರಚಿಸ ಲಾಗುತ್ತದೆ. ಮೊದಲನೆಯ ದಿನ ಸೂರ್ಯ, ಚಂದ್ರ, ಎರಡನೆಯ ದಿನ ಹೂಬಳ್ಳಿಯ ಅಲಂಕರಣ, ಮೂರನೆಯ ದಿನ ತುಳಸಿಕಟ್ಟೆ, ಜೋಳದಬೆಳೆ, ನಾಲ್ಕನೆಯದಿನ ಕೊಳಲಬಾವಿ, ಸ್ವಸ್ತಿಕ ಚಿಹ್ನೆ, ಐದನೆಯದಿನ ರಾಮನ ತೊಟ್ಟಿಲು, ಏಳುಸುತ್ತಿನ ಕೋಟೆ, ಆರನೆಯದಿನ ಹನುಮಂತ ದೇವರು, ಈಶ್ವರಲಿಂಗ ಇವುಗಳ ಚಿತ್ರ ಬರೆದರೆ, ಏಳನೆಯ ದಿನ ಈ ಮೊದಲು ಆರು ದಿನಗಳು ಬರೆದ ಚಿತ್ರಗಳಲ್ಲಿ ಕೆಲವನ್ನು ಆಯ್ದು ಬರೆಯುವುದು ಇಲ್ಲವೇ ಎಲ್ಲ ಚಿತ್ರಗಳನ್ನೂ ಒಟ್ಟಿಗೆ ಬರೆಯುತ್ತಾರೆ. ಏಳನೆಯ ದಿನ ಆಯ್ದ ಚಿತ್ರಗಳ ಜೊತೆಗೆ ಹೆಚ್ಚಿನದಾಗಿ ಆರತಿಯ ಚಿತ್ರವನ್ನು ಬಿಡಿಸುತ್ತಾರೆ.

## ೩. ಬಿದಿರುಬುಟ್ಟಿಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

ಶೀಗಿ ಹುಣ್ಣಿಮೆಯ ಆಚರಣೆ ಸಂದರ್ಭದಲ್ಲಿ ಗೋಡೆಯ ಮೇಲೆ ಚಿತ್ರ ಬರೆಯು ವಂತೆಯೇ ಉಪಯೋಗಿ ವಸ್ತುಗಳ ಮೇಲೆಯೂ ಚಿತ್ರ ರಚಿಸಲಾಗುತ್ತದೆ. ಅಶ್ವಿಜಶುದ್ಧ ಪೌರ್ಣಿಮೆಯ ಹಬ್ಬವೇ ಶೀಗಿಹುಣ್ಣಿಮೆ. ಒಕ್ಕಲಿಗರ ಭೂಮಿಪೂಜೆಯ ಈ ಹಬ್ಬದಲ್ಲಿ 'ಚರಗಚಲ್ಲುವ' ಆಚರಣೆಯು ಪ್ರಮುಖವಾಗಿ ಉತ್ತರ ಕರ್ನಾಟಕದ ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಬೆಳಗಾಂವ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಈ ಚರಗಕ್ಕಾಗಿ ಒಯ್ಯುವ ಬಿದಿರಿನ ಬುಟ್ಟಿಗಳ ಮೇಲೆ ಚಿತ್ರ ಬಿಡಿಸುತ್ತಾರೆ.

ಅದೇ ರೀತಿಯಾಗಿ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಹವ್ಯಕರು, ದೀವರ ಜನಾಂಗ ದವರು ಶೀಗಿಹುಣ್ಣಿಮೆಯನ್ನು 'ಭೂಮಿ ಹುಣ್ಣಿಮೆ' ಹಬ್ಬ ಎಂದು ಆಚರಿಸುತ್ತಾರೆ. ಭೂಮಿ ಪೂಜೆಯ ಆಚರಣೆಯ ಈ ಸಂದರ್ಭದಲ್ಲಿ ಬಿದಿರು ಬುಟ್ಟಿಗಳ ಮೇಲೆ ಹೆಂಗಸರು ಚಿತ್ರ ಬರೆಯುತ್ತಾರೆ. ಇವರು ಎರಡು ರೀತಿಯ ಬುಟ್ಟಿಗಳ ಮೇಲೆ ಚಿತ್ರ ರಚಿಸುತ್ತಾರೆ. ಸಣ್ಣದಾದ ಹಚ್ಚಂಬ್ಲಿ ಬುಟ್ಟಿ ಮತ್ತು ದೊಡ್ಡದಾದ ಭೂಮಣ್ಣಿ ಬುಟ್ಟಿ ಅಥವಾ ಭೂಮಿ ಹುಣ್ಣಿಮೆ ಬುಟ್ಟಿ, ಬಿದಿರು ಬುಟ್ಟಿಗಳ ಮೇಲೆ ಚಿತ್ರಿಸುವ ಚಿತ್ರಗಳು ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯಿಂದ ಕೂಡಿರುತ್ತದೆ. ಬಿದಿರು ಬುಟ್ಟಿಗಳ ಮೇಲೆ ಚಿತ್ರಿಸುವ ಈ ಶೀಗಿ ಚಿತ್ರಕಲೆಯನ್ನೂ ಸಹಿತ ಈ ಹಿಂದಿನಂತೆ ೧. ಸ್ವರೂಪ ೨. ಮಾಧ್ಯಮ ೩. ಪರಿಕರಗಳು ೪. ಸಿದ್ಧತಾ ಹಂತ ೫. ಚಿತ್ರರಚನಾ ವಿಧಾನ ೬. ವಸ್ತು ವಿಷಯಗಳು ಎಂಬುದಾಗಿ ವಿಂಗಡಿಸಿಕೊಂಡು ವಿವರಿಸಬಹುದು.

**೧. ಸ್ವರೂಪ :** ಇಲ್ಲಿನ ಚಿತ್ರಗಳು ಬಿದಿರುಬುಟ್ಟಿಯ ಹೊರಭಾಗದಲ್ಲಿ ರಚನೆ ಮಾಡಿರು ವುದರಿಂದ, ಸಹಜವಾಗಿ ಚಿತ್ರಗಳಿಗೆ ಉಬ್ಬಿದ ಹಿನ್ನೆಲೆ ಉಂಟಾಗಿ ಅತ್ಯಂತ ಸುಂದರವಾಗಿ, ಸ್ಫುಟವಾಗಿ ಕಂಗೊಳಿಸುತ್ತವೆ. ಇವು ಹೆಚ್ಚಾಗಿ ರೇಖಾಪ್ರಧಾನವಾಗಿದ್ದರೂ ಕೆಲವು ಸಲ ಚಪ್ಪಟೆ ಯಾಗಿ ವರ್ಣ ಲೇಪಿಸಿ ನೆರಳು ಚಿತ್ರದಂತೆಯೂ ರಚಿಸಲಾಗಿರುತ್ತದೆ. ಬುಟ್ಟಿಯ ಸುತ್ತಲೂ ಸಾಲಾಗಿ ಬಳೆಗಳಂತೆ ಚಿತ್ರಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ.

**೨. ಮಾಧ್ಯಮ :** ಬಿದಿರು ಬುಟ್ಟಿಯ ಮಾಧ್ಯಮದ ಮೇಲೆ ಚಿತ್ರಿಸುವ ಈ ವಿಧಾನದಲ್ಲಿ ಚಿತ್ರರಚನೆ ಮಾಡಲು ಸುಣ್ಣ, ಕೆಮ್ಮಣ್ಣು, ಹಳದಿ ಜೇಡಿಮಣ್ಣುಗಳನ್ನು ಬೆಳಗಾಂವ, ಧಾರವಾಡ, ಬಾಗಲಕೋಟೆ ಭಾಗಗಳಲ್ಲಿ ಮಾಧ್ಯಮಗಳಾಗಿ ಬಳಸಿದರೆ, ಉತ್ತರಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಮ್ಮಣ್ಣು, ಸುಣ್ಣ, ಅಕ್ಕಿಗಂಜಿಯನ್ನು ಚಿತ್ರರಚನಾ ಮಾಧ್ಯಮವಾಗಿ ಬಳಸುತ್ತಾರೆ.

**೩. ಪರಿಕರಗಳು :** ಬಿದಿರು ಬುಟ್ಟಿಗಳು, ಸುಣ್ಣ, ಸೆಗಣಿ, ಕೆಮ್ಮಣ್ಣು, ಹಳದಿ ಜೇಡಿ ಮಣ್ಣು, ಬೇರೆಬೇರೆ ನಾರಿನ ಕುಂಚಗಳು, ಬಣ್ಣ ಕಲಸಿಕೊಳ್ಳಲು ಪಾತ್ರೆ, ಅಕ್ಕಿಗಂಜಿ, ಗುರಗಿ ಕಾಯಿ, ಬಿದಿರಿನಕಡ್ಡಿ ಮುಂತಾದವು ಬೇಕಾಗುತ್ತವೆ.

**೪. ಸಿದ್ಧತಾ ಹಂತ :** ಚೆನ್ನಾಗಿ ಹೆಣಿಕೆಯಾಗಿರುವ ಬಿದಿರುಬುಟ್ಟಿಗಳನ್ನು ಮಾರುಕಟ್ಟೆ ಯಿಂದ ತಂದು ಅವುಗಳಿಗೆ ಸ್ವಲ್ಪ ಜೇಡಿಮಣ್ಣು, ಸುಣ್ಣ, ಆಕಳ ಸಗಣಿಯನ್ನು ಮಿಶ್ರಮಾಡಿದ ಲೇಪನವನ್ನು ಮೆತ್ತಬೇಕು. ಈ ಕಾರ್ಯವನ್ನು ಚಿತ್ರಬರೆಯುವ ಎರಡುದಿನ ಮೊದಲೇ ಮಾಡಬೇಕು. ಬುಟ್ಟಿಯಮೇಲೆ ಲೇಪಿಸಿದ ಸೆಗಣಿಯ ಮಿಶ್ರಣವು ಒಣಗಲು ಒಂದರಿಂದ ಎರಡು ದಿನಗಳು ಬೇಕಾಗುತ್ತವೆ. ಹೀಗೆ ಚಿತ್ರ ರಚಿಸಲು ಬುಟ್ಟಿಗಳನ್ನು ಸಿದ್ಧಮಾಡಿಟ್ಟು ಕೊಳ್ಳಬೇಕು.

೫. ಚಿತ್ರರಚನಾ ವಿಧಾನ : ಬಿದಿರು ಬುಟ್ಟಿಗಳ ಮೇಲೆ ಸಾರಣೆಮಾಡಿ ಒಣಗಿಸಿದ ನಂತರ ಚಿತ್ರರಚನೆ ಮಾಡಲಾಗುವುದು. ಧಾರವಾಡ, ಬೆಳಗಾಂವ, ಬಿಜಾಪುರ, ಬಾಗಲಕೋಟೆ ಭಾಗ ಗಳಲ್ಲಿ ಸಾಮಾನ್ಯವಾಗಿ ನಾಲ್ಕಾರು ಜನರ ಊಟದ ಅಡಿಗೆಯು ಹಿಡಿಯುವಷ್ಟು ಗಾತ್ರದ ಬಿದಿರು ಬುಟ್ಟಿಗಳನ್ನು ತಂದು ಅವುಗಳಿಗೆ ಲೇಪನಮಾಡಿ ಒಣಗಿಸುತ್ತಾರೆ. ನಂತರ ಹುರಿ ಮಂಜು, ಸುಣ್ಣ ಇವುಗಳನ್ನು ಟೆಂಗಿನಚಿಪ್ಪು ಇಲ್ಲವೆ ಮಣ್ಣಿನ ಮುಚ್ಚಳದಲ್ಲಿ ಪ್ರತ್ಯೇಕವಾಗಿ ಕಲಸಿಕೊಂಡು ದ್ರಾವಣ ತಯಾರಿಸುತ್ತಾರೆ. ಈ ದ್ರಾವಣದಲ್ಲಿ ಬಿದಿರಿನಕಡ್ಡಿ, ತೊಗರಿಕಡ್ಡಿ ಅಥವಾ ಟೆಂಗಿನನಾರು ಇಲ್ಲವೆ ಪುಂಡಿಯನಾರಿನ ಕುಂಚಗಳನ್ನು ಅದ್ದಿ, ಬುಟ್ಟಿಯ ಸುತ್ತಲೂ ಚಿತ್ರಗಳನ್ನು ಬರೆದು ಅಲಂಕರಿಸುತ್ತಾರೆ. ಈ ಚಿತ್ರರಚನೆಯನ್ನು ಹೆಣ್ಣುಮಕ್ಕಳೇ ಮಾಡುತ್ತಾರೆ.

ಉತ್ತರಕನ್ನಡ ಮತ್ತು ಶಿವಮೊಗ್ಗ ಭಾಗದ ಜನರು ಸಹಿತ ಮೊದಲಿಗೆ ಬಿದಿರು ಬುಟ್ಟಿ ಗಳನ್ನು ಸಾರಣೆ ಮಾಡಿ ಬಿಸಿಲಲ್ಲಿ ಒಣಗಿಸಿದ ನಂತರ ಚಿತ್ರಿಸುತ್ತಾರೆ. ಇವರು ಬುಟ್ಟಿಗಳಿಗೆ ಮೊದಲು ಸಗಣಿ ಬಳಿದು ನಂತರ ಅದರ ಮೇಲೆ ಕೆಮ್ಮಣ್ಣು ಲೇಪಿಸುತ್ತಾರೆ. ಅದು ಒಣಗಿದ ಮೇಲೆ ಅಕ್ಕಿಹಿಟ್ಟಿನಿಂದ ಮಾಡಿದ ಗಂಜಿಯಿಂದ ಚಿತ್ರಿಸುತ್ತಾರೆ. ಹಾಗೆ ಸುಣ್ಣವನ್ನು ಬುಟ್ಟಿಗೆ ಲೇಪಿಸಿ ಅದರ ಮೇಲೆ ಕೆಮ್ಮಣ್ಣು ಮತ್ತು ಗುರಗಿ ಮರದ ಕಾಯಿಗಳಿಂದ ತಯಾರಿಸಿದ ಕೆಂಪು ಬಣ್ಣದಿಂದ ಚಿತ್ರಿಸುವರು.

೬. ವಸ್ತು ವಿಷಯಗಳು : ಬಾಗಲಕೋಟೆ, ಧಾರವಾಡ, ಬೆಳಗಾಂವ, ಬಿಜಾಪುರ ಭಾಗ ಗಳಲ್ಲಿ ಚಿತ್ರಿಸುವ ಬುಟ್ಟಿಯ ಮೇಲಿನ ಚಿತ್ರಗಳಲ್ಲಿ ಏಕರೂಪತೆ ಇರುವುದಿಲ್ಲ. ಅವು ವ್ಯಕ್ತಿ ಯಿಂದ ವ್ಯಕ್ತಿಗೆ ಬದಲಾಗುತ್ತವೆ. ಅಲ್ಲದೇ ಇಂತಹುದೇ ಚಿತ್ರ ರಚಿಸಬೇಕೆಂಬ ನಿಯಮಗಳೂ ಇಲ್ಲ. ಸಾಮಾನ್ಯವಾಗಿ ಸೂರ್ಯ, ಚಂದ್ರ, ಸ್ವಸ್ತಿಕ, ಶುಭ ಲಾಭ, ಶ್ರೀ, ಓಂ, ನಂದಿ, ಏಣಿ, ನವಿಲು, ಕೋಳಿ, ಗಿಳಿ, ಗುಬ್ಬಿ, ಈಶ್ವರಲಿಂಗ, ಹಾವು, ಚೇಳು, ಝುರಿ, ನಕ್ಷತ್ರ, ಎಲೆಬಳ್ಳಿ, ಹೂ, ಕಾಯಿ, ವಿವಿಧ ಬಗೆಯ ಮರಗಳು, ಕಾಲಿನ ತೆನಿ, ಮಾನವಾಕೃತಿಗಳು ಕಂಡುಬರುತ್ತವೆ.

ಉತ್ತರಕನ್ನಡ, ಶಿವಮೊಗ್ಗ ಭಾಗದಲ್ಲಿ ಸಾಮಾನ್ಯವಾಗಿ ಜೋಗಿಜಡೆ, ಬತ್ತದ ಸಸಿ, ಬಣವೆ, ಗೊಂಬೆಸಾಲು, ಗಾಡಿ, ಬಾಗಿಲು, ಏಣಿ, ಅಡಿಕೆಮರ, ಬಳ್ಳಿ, ಆರತಿ, ಹೂವಿನಸಾಲು, ಇನ್ನಿತರ ನಕ್ಷೆಗಳನ್ನು ಚಿತ್ರಿಸುತ್ತಾರೆ. ಈ ಮೇಲೆ ವಿವರಿಸಿದ ಎರಡೂ ಭಾಗದಲ್ಲಿ ಇರುವ ಆಚರಣೆಯು ಒಂದೇ ರೀತಿಯ ಆಶಯ ಉಳ್ಳದ್ದಾಗಿದೆ. ಪ್ರಾದೇಶಿಕ ವ್ಯತ್ಯಾಸದಿಂದ ಚಿತ್ರಗಳ ವಿಷಯದಲ್ಲಿ ಮಾತ್ರ ವ್ಯತ್ಯಾಸಗಳನ್ನು ಕಾಣುತ್ತೇವೆ.

## ಆ. ಮಣ್ಣಿನ ಪಾತ್ರೆಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

ಉತ್ತರ ಕರ್ನಾಟಕದ ಬಾಗಲಕೋಟೆ, ವಿಜಾಪುರ, ಧಾರವಾಡ, ಗದಗ, ಬೆಳಗಾಂವ ಭಾಗಗಳಲ್ಲಿ ಶೀಗಿಹುಣ್ಣಿಮೆ ಆಚರಣೆಯ ಕೊನೆಯ ಹಂತದಲ್ಲಿ ಶೀಗಿ ಕಳಿಸುವ ಸಂಪ್ರದಾಯ

ವಿದೆ. ಈ ಸಂದರ್ಭದಲ್ಲಿ ಮಣ್ಣಿನ ಗಡಿಗೆಗಳ ಮೇಲೆ ಚಿತ್ರಬರೆದು ಅಲಂಕರಿಸಿ, ಆ ಗಡಿಗೆಗಳ ಒಳಗೆ ದೀಪವನ್ನಿಟ್ಟು ನೀರಿನಲ್ಲಿ ತೇಲಿಬಿಡುತ್ತಾರೆ. ಇದಕ್ಕೆ "ಕೊಂಗಡ ಗಡಿಗೆ ಕಳಿಸುವುದು" ಎಂದು ಹೇಳುತ್ತಾರೆ.

ಶೀಗಿಹುಣ್ಣಿಮೆಯ ಮಧ್ಯರಾತ್ರಿ ವೇಳೆಗೆ ಈ ಕೊಂಗಡಗಡಿಗೆ ಕಳಿಸುವ ಕ್ರಿಯೆ ನಡೆಯುತ್ತದೆ. ಮೊದಲೇ ಹೊಸದಾದ ಮಣ್ಣಿನ ಗಡಿಗೆಗಳನ್ನು ತಂದು, ಅವುಗಳಿಗೆ ಐದು ತೂತುಗಳನ್ನು ಕೊರೆಯುತ್ತಾರೆ. ಆಮೇಲೆ ಗಡಿಗೆಗಳ ಮೇಲೆ ಸುಣ್ಣ, ಕೆಮ್ಮಣ್ಣುಗಳಿಂದ ಸುತ್ತಲೂ ಚಿತ್ರಗಳನ್ನು ಬರೆದು ಅಲಂಕರಿಸುತ್ತಾರೆ.

ಈ ಚಿತ್ರಗಳನ್ನು ಓಣಿಯ ಹೆಣ್ಣುಮಕ್ಕಳು ರಚಿಸುತ್ತಾರೆ. ಹುಣ್ಣಿಮೆಯ ರಾತ್ರಿ ಓಣಿಯ ಸ್ತ್ರೀ ಪುರುಷರು ಮನೆಯಲ್ಲಿ ಕೂಡಿಸಿರುವ ಶೀಗಿ ಮೂರ್ತಿಗಳನ್ನು ಮತ್ತು ಅದರೊಂದಿಗೆ ಚಿತ್ರಬರೆದು ಅಲಂಕರಿಸಿದ ಈ ಗಡಿಗೆಗಳನ್ನು ಪೂಜಿಸುತ್ತಾರೆ. ಆಮೇಲೆ ಸಿಹಿ ಊಟ ಮಾಡಿಕೊಂಡು, ದೀಪ ಹಚ್ಚಿದ ಹಣತೆಗಳನ್ನು ಆ ಗಡಿಗೆಗಳಲ್ಲಿ ಇಟ್ಟುಕೊಂಡು ಊರ ಹೊರಗಿರುವ ಕೆರೆ, ಹಳ್ಳ, ನದಿ ಮುಂತಾದ ನೀರಿರುವ ಸ್ಥಳಕ್ಕೆ ಹೊರಡುತ್ತಾರೆ.

ಇಲ್ಲಿ ವಿಶೇಷತೆ ಎಂದರೆ ಗಡಿಗೆಗಳನ್ನು ಚಿತ್ರಬರೆದು ಅಲಂಕರಿಸುವುದು, ಪೂಜಿಸುವುದು ಎಲ್ಲ ಸ್ತ್ರೀಯರು ಮಾಡಿದರೆ, ಗಡಿಗೆಗಳನ್ನು ಹೊತ್ತು ಕೆರೆಗೆ ಸಾಗುವುದು ಪುರುಷರು. ಹೆಣ್ಣುಮಕ್ಕಳಂತೆ ವೇಷ ಧರಿಸಿದ ಪುರುಷರು ದೀಪಹಚ್ಚಿದ ಗಡಿಗೆಗಳನ್ನು ಹೊತ್ತುಕೊಂಡು ಸಾಲಾಗಿ ಹೋಗುತ್ತಾರೆ. ಅವರ ಹಿಂದೆ ಸ್ತ್ರೀಯರ ಗುಂಪು ಶೀಗಿ ಹಾಡುಗಳನ್ನು ಹಾಡುತ್ತ ಸಾಗುವುದು. ಕೆರೆ ಇಲ್ಲವೆ ನದಿಯನ್ನು ತಲುಪಿದ ಈ 'ಶೀಗಿ ಮಕ್ಕಳು' ಮತ್ತೆ ಅಲ್ಲಿ ಗಡಿಗೆಗಳನ್ನು ಪೂಜಿಸಿ, ದೀಪದ ಹಣತೆಯ ಸಮೇತ ಗಡಿಗೆಗಳನ್ನು ನೀರಿನಲ್ಲಿ ತೇಲಿಬಿಡುತ್ತಾರೆ. ಬೆಳದಿಂಗಳ ಬೆಳಕಿನಲ್ಲಿ ನೀರಿನಲ್ಲಿ ತೇಲುತ್ತ ಸಾಗುವ ಈ ಗಡಿಗೆಗಳು ನಕ್ಷತ್ರಗಳಂತೆ ಮಿನು ಗುತ್ತವೆ.

ಸುಣ್ಣ ಕೆಮ್ಮಣ್ಣುಗಳಿಂದ, ಬಿದಿರುಕಡ್ಡಿ ಇಲ್ಲವೆ ಟೆಂಗಿನ ನಾರಿನ ಕುಂಚಗಳನ್ನು ಉಪಯೋಗಿಸಿ ಚಿತ್ರರಚನೆ ಮಾಡುವ ಈ ವಿಧಾನದಲ್ಲಿ ಇಂತಹವೇ ಚಿತ್ರಗಳನ್ನು ಬರೆಯ ಬೇಕೆಂಬ ನಿಯಮವಿಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ವಿಷಯಗಳು ಬದಲಾಗುತ್ತವೆ. ಸಾಮಾನ್ಯ ವಾಗಿ ಸೂರ್ಯ, ಚಂದ್ರ, ನಕ್ಷತ್ರ, ಹೂಬಳ್ಳಿ ನಕ್ಷೆ, ಮನುಷ್ಯಾಕಾರಗಳು, ಏಣಿ, ಹಾವು, ಚೇಳು, ಝುರಿ, ಸ್ವಸ್ತಿಕ, ವಿವಿಧ ವಿನ್ಯಾಸದ ವೃತ್ತ ಚೌಕಗಳು ಚುಕ್ಕಿ ಅಲಂಕಾರಗಳು ಕಂಡು ಬರುತ್ತವೆ.

## ೫. ಕಲ್ಲಿನ ಗುಂಡುಗಳ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆ

ಶೀಗಿ ಆಚರಣೆಯ ಸಂದರ್ಭದಲ್ಲಿ ಮನೆಯ ಒಳಭಾಗ, ಹೊರಭಾಗದ ಗೋಡೆಗಳಲ್ಲಿ ಮತ್ತು ಮಣ್ಣಿನ ಪಾತ್ರೆಗಳ ಮೇಲೆ ಚಿತ್ರ ಬರೆಯುವಂತೆಯೇ ಕಲ್ಲಿನ ಮಾಧ್ಯಮದ ಮೇಲೆಯೂ ಚಿತ್ರರಚನೆ ಮಾಡುವ ಸಂಪ್ರದಾಯವಿದೆ. ಉತ್ತರ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಶೀಗಿಹುಣ್ಣಿಮೆ ಹಬ್ಬದಲ್ಲಿ ಕಲ್ಲಿನ ಮೇಲೆ ಚಿತ್ರ ಬರೆಯುತ್ತಾರೆ.

ಉತ್ತರ ಕರ್ನಾಟಕದ ಬೀದರ್, ಗುಲಬರ್ಗಾ, ಬಳ್ಳಾರಿ, ರಾಯಚೂರು, ವಿಜಾಪುರ, ಬಾಗಲಕೋಟೆ, ಬೆಳಗಾಂವ, ಧಾರವಾಡ, ಗದಗ ಜಿಲ್ಲೆಗಳಲ್ಲಿ ಈ ಪದ್ಧತಿ ಕಂಡುಬರುತ್ತದೆ. ಶೀಗಿಹುಣ್ಣಿಮೆಯ ಸಂದರ್ಭದಲ್ಲಿ ಈ ಭಾಗಗಳಲ್ಲಿ 'ಚರಗ ಚೆಲ್ಲುವ' ಸಂಪ್ರದಾಯವಿದೆ. 'ಚರಗ' ಎಂದರೆ ಬೆಳೆದುನಿಂತ ಭೂತಾಯಿಗೆ ವಿವಿಧ ರೀತಿಯ ನೈವೇದ್ಯ ಸಮರ್ಪಿಸುವದಾಗಿದೆ.

ಶೀಗಿಹುಣ್ಣಿಮೆಯ ದಿನ ಒಳ್ಳೆ ಸಂಭ್ರಮದಿಂದ ಮನೆಯಲ್ಲಿ ಹೋಳಿಗೆ, ಹುಗ್ಗಿ, ಕಡಬು, ಅಣ್ಣಾ, ತುಪ್ಪ, ಸಂಡಿಗೆ, ಹಪ್ಪಳ ಇತ್ಯಾದಿ ಭಕ್ಷಗಳನ್ನು ತಯಾರಿಸಿಕೊಂಡು ಹೊಲಕ್ಕೆ ಹೋಗುತ್ತಾರೆ. ಅಲ್ಲಿ ಗಿಡದ ನೆರಳಿನಲ್ಲಿ ಐದು ಕಲ್ಲುಗಳನ್ನು ಪ್ರತಿಷ್ಠಾಪಿಸಿ, ಅವುಗಳಿಗೆ ಸುಣ್ಣ, ಕೆಮ್ಮಣ್ಣುಗಳಿಂದ ಚಿತ್ತಾರ ಬರೆದು ಅಲಂಕರಿಸಿ ಪೂಜೆ ಸಲ್ಲಿಸುತ್ತಾರೆ.

ಪಾಂಡವರು ಅಜ್ಞಾತವಾಸಕ್ಕೆ ಹೋದ ಸ್ಮರಣೆಗಾಗಿ ಈ ರೀತಿ ಕಲ್ಲುಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಸಾಮಾನ್ಯವಾಗಿ ಐದು ಕಲ್ಲುಗಳನ್ನು ಹೀಗೆ ಚಿತ್ತಾರ ಬರೆದು ಪೂಜಿಸುವ ಪದ್ಧತಿ ಇದ್ದು, ಇನ್ನೂ ಕೆಲವರು ಕುಂತಿ, ದ್ರೌಪದಿ ಸೇರಿ ಏಳು ಕಲ್ಲುಗಳನ್ನು ಪೂಜಿಸುತ್ತಾರೆ. ಪಾಂಡವರ ಕಲ್ಲುಗಳಿಗೆ ಪೂಜಿಸಿ ನೈವೇದ್ಯ ಮಾಡಿದ ನಂತರ ಚರಗದ ಬುಟ್ಟಿಯಲ್ಲಿ ಎಲ್ಲ ಬಗೆಯ ನೈವೇಧ್ಯ ತುಂಬಿಕೊಂಡು ಹೊಲದ ತುಂಬ ತಿರುಗಾಡುತ್ತ ಬೆಳೆ ಹುಲುಸಾಗಲಿ ಎಂದು ಬುಟ್ಟಿಯಲ್ಲಿರುವ ಭಕ್ಷವನ್ನು ಭೂತಾಯಿಗೆ ಅರ್ಪಿಸುತ್ತಾರೆ. ಇದೇ ಚರಗ ಚಲ್ಲುವ ವಿಧಾನ.

ಈ ಸಂದರ್ಭದಲ್ಲಿ ಕಲ್ಲಿನಮೇಲೆ ಚಿತ್ರಿಸುವ ಚಿತ್ರ ವಿನ್ಯಾಸಗಳಲ್ಲಿ ಹೆಚ್ಚಿನ ವೈವಿಧ್ಯತೆ ಇರುವುದಿಲ್ಲ. ಸಾಮಾನ್ಯವಾಗಿ ಎರಡು ಅಥವಾ ನಾಲ್ಕು ರೇಖಾವಿನ್ಯಾಸದ ವೃತ್ತಗಳು, ಪೂರ್ಣಚಂದ್ರನ ಹಾಗಿರುವ ಸುಣ್ಣ ಮತ್ತು ಕೆಮ್ಮಣ್ಣಿನ ಚಪ್ಪಟೆ ಬಣ್ಣದ ಲೇಪನಗಳು, ವಿಭೂತಿ ಲೇಪನದಂತೆ ಮೂರು ಬೆರಳನ್ನು ಸುಣ್ಣ ಮತ್ತು ಕೆಮ್ಮಣ್ಣಿನಲ್ಲಿ ಅದ್ದಿ ಕಲ್ಲುಗಳಿಗೆ ಬಳಿಯುವುದು, ಅಲ್ಲದೇ ಕೆಲವು ಸಲ ಸ್ವಸ್ತಿಕದಂತಹ ಚಿಹ್ನೆಯನ್ನು ಬರೆಯಲಾಗಿರುತ್ತದೆ.

ಕಲ್ಲು ಮಾಧ್ಯಮದ ಮೇಲೆ ರಚನೆಯಾಗುವ ಈ ಶೀಗಿ ಚಿತ್ರಕಲೆಯಲ್ಲಿ ವರ್ಣಮಾಧ್ಯಮವಾಗಿ ಸುಣ್ಣ ಮತ್ತು ಕೆಮ್ಮಣ್ಣುಗಳು ಬಳಕೆಯಾಗುತ್ತವೆ. ಅವುಗಳನ್ನು ನೀರಿನಲ್ಲಿ ಕಲಸಿ ಉಪಯೋಗಿಸಲಾಗುತ್ತದೆ. ಕುಂಚಗಳಾಗಿ ಟೆಂಗಿನನಾರು ಮತ್ತು ಗಿಡದ ಟೊಂಗೆಯ ಜಜ್ಜಿದ ಭಾಗವನ್ನು ಉಪಯೋಗಿಸುತ್ತಾರೆ. ಅದರೂ ಹೆಚ್ಚಾಗಿ ಕೈಬೆರಳುಗಳಿಂದಲೇ ಈ ಚಿತ್ರವಿನ್ಯಾಸಗಳನ್ನು ರೂಪಿಸಲಾಗುತ್ತದೆ.

ಈ ಮೇಲೆ ಹೇಳಲಾದ ಶೀಗಿ ಚಿತ್ರಕಲೆಯ ನಾಲ್ಕು ಪ್ರಕಾರಗಳನ್ನು ತೌಲನಿಕವಾಗಿ ನೋಡಿದಾಗ ಕೆಲವು ಸಾಮ್ಯತೆಗಳು, ವ್ಯತ್ಯಾಸಗಳು, ವೈರುಧ್ಯಗಳು, ಅಂತರ್ ಸಂಬಂಧಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಕೆಲವು ಸಂಗತಿಗಳನ್ನು ಹೀಗೆ ವಿವೇಚಿಸಬಹುದು.

ಮೊದಲಿಗೆ ಸ್ವರೂಪದ ಬಗ್ಗೆ ಹೇಳುವುದಾದರೆ ಬೀದರ್ ಭಾಗದಲ್ಲಿ ಹೊರಗೋಡೆಯಲ್ಲಿ ರಚಿಸುವ ಶೀಗಿ ಚಿತ್ರಕಲೆಯು ಶಿಲ್ಪ ಮತ್ತು ಚಿತ್ರ ಎರಡರ ಆಯಾಮಗಳನ್ನು ಪಡೆದು ಕೊಂಡಿರುವುದು ವಿಶೇಷವಾಗಿದೆ. ಹಾಗೆಯೇ ಮನೆಯ ದ್ವಾರ ಬಾಗಿಲಲ್ಲಿ ಈ ಚಿತ್ರಗಳು ರಚನೆಯಾಗಿರುವುದರಿಂದ ಪ್ರದರ್ಶನದ ಆಶಯವೂ ಪೂರಕವಾಗಿ ಕೆಲಸ ಮಾಡಿದೆ. ಆದರೆ ಮನೆಯ ಒಳಭಾಗದ ಗೋಡೆಯಲ್ಲಿ ರಚಿಸುವ ಶೀಗಿ ಚಿತ್ರಕಲೆಯು ಸೀಮಿತವಾದ ಪ್ರದರ್ಶಕ ವ್ಯಾಪ್ತಿಯನ್ನು ಹೊಂದಿದ್ದು ಕಂಡುಬರುತ್ತದೆ.

ಬಿದಿರು ಬುಟ್ಟಿಗಳ ಮೇಲೆ, ಮಣ್ಣಿನ ಪಾತ್ರೆಗಳ ಮೇಲೆ, ಕಲ್ಲಿನ ಗುಂಡುಗಳ ಮೇಲೆ ರಚಿಸುವ ಶೀಗಿ ಚಿತ್ರಕಲೆಯು ಸಾಮಾನ್ಯವಾಗಿ ಉಬ್ಬು ಹಿನ್ನೆಲೆಯನ್ನು ಹೊಂದಿ ಆಕರ್ಷಕ ವಾಗಿ ಕಂಗೊಳಿಸುತ್ತವೆ. ಇವು ಸಹಿತ ಆಚರಣೆಯ ಜೊತೆಗೆ ವಿಶಾಲ ಪ್ರದರ್ಶಕ ವ್ಯಾಪ್ತಿಯನ್ನು ಹೊಂದಿವೆ.

ಮಾಧ್ಯಮಗಳ ವಿಷಯವಾಗಿ ನೋಡಿದಾಗ ಮನೆಯ ಒಳಭಾಗ ಮತ್ತು ಹೊರಭಾಗದ ಶೀಗಿ ಚಿತ್ರಗಳು ಗೋಡೆಯ ಮಾಧ್ಯಮದ ಮೇಲೆ ರಚನೆಯಾದರೆ, ಒಂದು ಮಣ್ಣಿನ ಪಾತ್ರೆ ಮೇಲೆ, ಇನ್ನೊಂದು ಪ್ರಕಾರ ಕಲ್ಲಿನ ಮೇಲೆ ರಚನೆಯಾಗುತ್ತದೆ. ಪರಿಕರಗಳು ಸಾಮಾನ್ಯವಾಗಿ ಒಂದೇ ತೆರನಾಗಿರುತ್ತವೆ. ಸಿದ್ಧತಾಹಂತ ಮತ್ತು ಚಿತ್ರರಚನಾ ವಿಧಾನಗಳು ಆಯಾಪ್ರಕಾರಕ್ಕೆ ತಕ್ಕಂತೆ ವ್ಯತ್ಯಾಸಗೊಳ್ಳುತ್ತವೆ.

ವಸ್ತುವಿಷಯಗಳಲ್ಲಿಯೂ ಕೆಲವು ಒಂದೇ ರೀತಿಯಲ್ಲಿದ್ದರೆ ಮತ್ತೆ ಕೆಲವು ಭಿನ್ನತೆಯಿಂದ ಕೂಡಿವೆ. ಮನೆಯ ಹೊರಗೋಡೆ, ಮತ್ತು ಒಳಗೋಡೆಯ ಮಾಡಿನ ಸುತ್ತಲೂ ಬರೆಯುವ ಶೀಗಿ ಚಿತ್ರಕಲೆಯಲ್ಲಿ ಮೊದಲದಿನ ಸೂರ್ಯ ಚಂದ್ರರನ್ನು ಬರೆಯುತ್ತಾರೆ.

ಅದೇ ರೀತಿ ಬಿದಿರು ಬುಟ್ಟಿಗಳ ಮೇಲೆ ಮಣ್ಣಿನ ಪಾತ್ರೆಗಳ ಮೇಲೆ ಮತ್ತು ಕಲ್ಲಿನ ಗುಂಡುಗಳ ಮೇಲೆ ಬರೆಯುವ ಶೀಗಿ ಚಿತ್ರಕಲೆಯಲ್ಲಿಯೂ ಸೂರ್ಯ ಚಂದ್ರರ ಚಿತ್ರಗಳಿವೆ. ಅಷ್ಟೇ ಅಲ್ಲದೇ ಕರ್ನಾಟಕದಾದ್ಯಂತ ಆಚರಿಸುವ ಬೆಳದಿಂಗಳ ಆಚರಣೆಯಲ್ಲಿಯೂ ಮೊದಲದಿನ ಸೂರ್ಯ ಚಂದ್ರರನ್ನೇ ಬರೆಯುತ್ತಾರೆ. ಉತ್ತರ ಕರ್ನಾಟಕದ ಇನ್ನೂ ಅನೇಕ ಆಚರಣೆಗಳಲ್ಲಿಯೂ ಸೂರ್ಯ ಚಂದ್ರರ ಚಿತ್ರಗಳು ಕಂಡುಬರುತ್ತವೆ.

ದೀಪಾವಳಿ ಹಬ್ಬದಲ್ಲಿ ಕಾರಹುಣ್ಣಿಮೆಯಲ್ಲಿ ಮನೆಗೋಡೆಗಳ ಮೇಲೆ, ಬಾಗಿಲ ಬದಿ ಯಲ್ಲಿ ಬರೆಯುವ ಚಿತ್ರಗಳಲ್ಲಿ ಸೂರ್ಯ ಚಂದ್ರರ ಚಿತ್ರಗಳಿವೆ. ಕೆಲವು ದೇವಾಲಯ, ಮಠಮಾನ್ಯಗಳು ಜಾತ್ರಾ ಸಮಯದಲ್ಲಿ ಅವುಗಳನ್ನು ಸುಣ್ಣ ಬಣ್ಣಗಳಿಂದ ಸಾರಿಸಿ ಅಲಂಕರಿ ಸುವಲ್ಲಿ, ಸೂರ್ಯ ಚಂದ್ರರ ಚಿತ್ರಗಳಿರುತ್ತವೆ.

ಹೀಗೆ ಇನ್ನೂ ಅನೇಕ ಉದಾಹರಣೆ ಕೊಡಬಹುದು. ಇವುಗಳಲ್ಲದೇ ಸಾಮಾನ್ಯವಾಗಿ ಜನಪದದ ಚಿತ್ರ ಪ್ರಕಾರಗಳಲ್ಲಿ ಹೆಚ್ಚಿನವುಗಳಲ್ಲಿ ಸೂರ್ಯ ಚಂದ್ರರ ಚಿತ್ರಗಳು ಕಂಡು

ಬರುತ್ತವೆ. ಅಲ್ಲದೇ ಪ್ರಾಚೀನ ಇಟಲಿಯ ಜನರು ವರ್ಷಕ್ಕೊಮ್ಮೆ ಚಂದ್ರನ ಚಿತ್ರ ಬರೆದು ಪೂಜಿಸಿ, ರೊಟ್ಟಿ ಮತ್ತು ಆಡಿನ ಮರಿಯ ನೈವೇದ್ಯ ಅರ್ಪಿಸುತ್ತಾರೆ.

ಸೂರ್ಯ ಚಂದ್ರರ ಚಿತ್ರಗಳನ್ನು ಪ್ರಾಗಿತಿಹಾಸ ಕಾಲದ ಗುಹಾ ಚಿತ್ರಗಳಲ್ಲಿಯೇ ಗುರುತಿಸಬಹುದಾಗಿದೆ. ಇಲ್ಲಿನ ಅನೇಕ ಮಂಡಲಾಕಾರದ ವಿನ್ಯಾಸಗಳು ಸೂರ್ಯ ಚಂದ್ರರ ಪ್ರತಿರೂಪಗಳೇ ಆಗಿವೆ. ಪ್ರಕೃತಿಯ ಶಕ್ತಿಗಳೆಂದು ನಂಬಿದ ಸೂರ್ಯ ಚಂದ್ರರನ್ನು ಚಿತ್ರದಲ್ಲಿ ಬರೆದು ಆರಾಧಿಸುವುದು ಹೀಗೆ ಪ್ರಾಚೀನ ಕಾಲದಿಂದಲೇ ಕಂಡು ಬರುತ್ತದೆ.

ಈ ರೀತಿ ಆದಿಮಾನವನಿಂದ ಆರಂಭವಾದ ಆರಾಧನಾ ಕ್ರಮವು ಅನೇಕ ಸ್ಥಿತ್ಯಂತರಗಳನ್ನು ಪಡೆದುಕೊಂಡು ಭಿನ್ನ ಭಿನ್ನ ಸ್ವರೂಪದಲ್ಲಿ ಉಳಿದುಕೊಂಡು ಬಂದಿದೆ. ಹೀಗೆ ಉಳಿದುಕೊಂಡು ಬಂದ ಒಂದುಬಗೆಯ ಸೂರ್ಯ ಚಂದ್ರರ ಆರಾಧನೆಯ ಕ್ರಮವೇ ಶೀಗಿ ಚಿತ್ರಕಲೆಯಲ್ಲಿ ಕಂಡುಬರುತ್ತದೆ ಎನ್ನಬಹುದು.

ಎರಡನೆಯದಿನದ ಚಿತ್ರದಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಬೀದರ ವಿಭಾಗದಲ್ಲಿ ಎರಡನೆಯದಿನ ಗಂಗಿ ಗೌರಿಯರ ಚಿತ್ರ ಬರೆದರೆ, ಬಾಗಲಕೋಟ್, ವಿಜಾಪುರ, ಬೆಳಗಾವಿ, ಧಾರವಾಡ ಭಾಗಗಳಲ್ಲಿ ಎಲೆ, ಹೂಬಳ್ಳಿಯ ಅಲಂಕರಣದ ವಿನ್ಯಾಸ ರಚಿಸುತ್ತಾರೆ.

ಮೂರು, ನಾಲ್ಕು, ಐದು ಮತ್ತು ಆರನೆಯದಿನ ಹೆಚ್ಚು ಕಡಿಮೆ ಅಥವಾ ಒಂದು ದಿನ ಹಿಂದೆ ಮುಂದೆ ಇರುವಂತೆ ಸಾಮಾನ್ಯವಾಗಿರುವ ಕೆಲವು ಚಿತ್ರಗಳಾದ ಕೊಳಲಭಾವಿ (ಭಾರಂಭಾವಿ), ಬಾಳೆಗಿಡ, ಜೋಳದ ಬೆಳೆ, ಕಬ್ಬಿನಗಳು, ಬೆಳೆಕಾಯಲು ಮನುಷ್ಯ, ತುಳಸಿ ಕಟ್ಟೆ, ಆಂಜನೇಯ, ಈಶ್ವರ, ಏಳುಸುತ್ತಿನ ಕೋಟೆ ಮುಂತಾದವುಗಳನ್ನು ಬರೆಯುವುದು ಕಂಡುಬರುತ್ತದೆ.

ಈ ಚಿತ್ರಗಳಿಂದ ನಮ್ಮ ಪ್ರಾಚೀನರ ಸಾಂಸ್ಕೃತಿಕ ಬದುಕಿನ ಹೆಜ್ಜೆಗಳನ್ನು ಸ್ಥೂಲವಾಗಿ ಗುರುತಿಸಬಹುದಾಗಿದೆ. ಹಗಲು ರಾತ್ರಿಯ ಸೃಷ್ಟಿ ವೈಚಿತ್ರ್ಯಗಳನ್ನು ಕಂಡ ಪ್ರಾಚೀನ ಮಾನವ ಅವುಗಳನ್ನು ಪ್ರತಿನಿಧಿಸುವ ಸೂರ್ಯ ಚಂದ್ರರ ಪೂಜೆಗೆ ತೊಡಗಿದನು. ಹಾಗೆಯೇ ನೀರಿನ ಪ್ರಾಮುಖ್ಯತೆಯನ್ನು ಮನಗಂಡು ನದಿಗಳ ಮುಖಜ ಭೂಮಿಯಲ್ಲಿ ವಾಸಿಸಲು ಪ್ರಾರಂಭಿಸಿದನು.

ಇದರ ಹಿನ್ನೆಲೆಯಾಗಿ ಆತ ಭಾವಿ, ನದಿ, ಸಮುದ್ರವನ್ನು ಪವಿತ್ರವೆಂದು ಭಾವಿಸಿ ಅವುಗಳನ್ನು ಬೇರೆ ಬೇರೆ ರೂಪದಲ್ಲಿ ಆರಾಧಿಸುವುದನ್ನು ರೂಢಿಸಿಕೊಂಡನು. ವ್ಯವಸಾಯವು ಆತನ ಪ್ರಮುಖ ಕಸಬಾಗಿ ರೂಪಾಂತರಗೊಂಡಿರುವುದು, ಕಾಡು ಪ್ರಾಣಿಗಳಿಂದ ತನ್ನ ಬೆಳೆಯನ್ನು ರಕ್ಷಿಸಿಕೊಳ್ಳುವಂತಹ ಕ್ರಮಗಳಲ್ಲಿ ಆತ ತೊಡಗಿಕೊಂಡಿರುವುದನ್ನು, ಇಲ್ಲಿನ ಕಬ್ಬು, ಜೋಳ ಹಾಗೂ ಇನ್ನಿತರ ಗಿಡದ ಚಿತ್ರ ಮತ್ತು ಅವುಗಳನ್ನು ಕಾಯಲು ವ್ಯಕ್ತಿಯನ್ನು ಚಿತ್ರಿಸಿರುವ ಕ್ರಮದಿಂದ ತಿಳಿಯಬಹುದಾಗಿದೆ.

ಈಶ್ವರನ ಚಿತ್ರ, ಹನುಮಂತನ ಚಿತ್ರಗಳು ಆರ್ಯ ದ್ರಾವಿಡರ ಸಂಘರ್ಷಗಳನ್ನು ಪ್ರತಿ ಬಿಂಬಿಸುವಂತೆಯೇ ಏಳುಸುತ್ತಿನ ಕೋಟೆ, ತುಳಸೀಕಟ್ಟೆ, ಸ್ವಸ್ತಿಕ ಮುಂತಾದವುಗಳು ಅವರ ಆಧ್ಯಾತ್ಮ ವಿಚಾರಗಳನ್ನು ಮತ್ತು ಪೌರಾಣಿಕ ಸಂಗತಿಗಳನ್ನು ಸಂಕೇತಿಸುತ್ತವೆ. ಈ ರೀತಿ ಇಲ್ಲಿನ ಚಿತ್ರಗಳನ್ನು ನೋಡಿದಾಗ ಸಂಪ್ರದಾಯಗಳೆಂದರೆ ಬರೀ ಆಚರಣೆಗಳಷ್ಟೇ ಅಲ್ಲ. ಅವುಗಳ ಮೌಲ್ಯದ ಬಗೆಗಿನ ನಂಬಿಕೆಗಳನ್ನು ಒಳಗೊಂಡಿರುತ್ತವೆ. ಅವು ಜನಾಂಗದ ಸಂಸ್ಕೃತಿಯ ವಾಹಕಗಳಾಗಿ ದುಡಿಯುತ್ತಿರುತ್ತವೆ. ಮತ ಧರ್ಮಗಳಿಂದ ಪ್ರಭಾವಿತವಾದ ನಂಬುಗೆ, ಆಚರಣೆ ಮೊದಲಾದವು ಒಂದು ಜನವರ್ಗದ ಸಂಸ್ಕೃತಿಯನ್ನು ರೂಪಿಸುತ್ತವೆ. ಶಿಷ್ಟಾಚಾರಗಳನ್ನು ರೂಪಿಸುತ್ತವೆ. ಸಾಹಿತ್ಯ, ಕಲೆಗಳಲ್ಲಿ ಅವುಗಳ ಆಶಯಗಳು ಪ್ರಕಟಗೊಳ್ಳು ತ್ತವೆ ಎಂಬಂತಹ ಸಂಗತಿಗಳು ತಿಳಿದು ಬರುತ್ತವೆ.

ಇದನ್ನು ಇನ್ನೂ ಸ್ಥೂಲವಾಗಿ ಹೇಳುವುದಾದರೆ, ಪ್ರಾಚೀನ ಕಾಲದಿಂದಲೂ ಮಾನವ ಮತ್ತು ನಿಸರ್ಗದ ಸಂಬಂಧ ಗಾಢವಾಗಿದ್ದು ಕಂಡುಬರುತ್ತದೆ. ಮಾನವನ ಜೀವನ ವಿಧಾನ ರೂಪಿಸಿದ್ದು, ಅವನ ನಾನಾ ಬಗೆಯ ಚಟುವಟಿಕೆಗಳಿಗೆ ಕಾರಣವಾದದ್ದು ನಿಸರ್ಗ. ಕಾಲದಿಂದ ಕಾಲಕ್ಕೆ ನಿಸರ್ಗದ ಪರಿಣಾಮ ನಿರ್ಧಿಷ್ಟವಾಗುತ್ತ ಬಂತು.

ಸೂರ್ಯ ಹುಟ್ಟಿ ಬೆಳಕು ಕೊಟ್ಟ. ಮೋಡ-ಮಳೆ, ನಕ್ಷತ್ರಗಳ ಮಿನುಕು, ಹಸಿರು, ಹೂ, ಬಳ್ಳಿ, ಮರ, ಅಸಂಖ್ಯಾತ ಪ್ರಾಣಿ, ಪಕ್ಷಿ, ಇನ್ನಿತರ ಜೀವ ಜಂತುಗಳು, ಇಂತಹ ನೈಸರ್ಗಿಕ ವ್ಯಾಪಾರ ಮಾನವನ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. ಅದರಿಂದಾಗಿ ನಾನಾಬಗೆಯ ನಂಬಿಕೆ, ಆಚರಣೆಗಳು ರೂಢಿಗೆ ಬಂದಿದ್ದು ಅಂತಹವುಗಳಲ್ಲಿ ಶೀಗಿ ಚಿತ್ರ ಬರೆಯುವ ಸಂಪ್ರದಾಯವು ಒಂದಾಗಿದೆ ಎನ್ನಬಹುದು.

ಶೀಗಿ ಚಿತ್ರಕಲೆಯು ಜನಪದ ಕಲಾಪ್ರಕಾರವಾಗಿದ್ದರೂ, ಚಿತ್ರಕಲೆಯ ಪ್ರಮುಖ ಅಂಶ ಗಳಾದ ಸಂಯೋಜನೆ, ಆಕಾರ, ಸ್ಥಳಾವಕಾಶ, ರೇಖಾವಿನ್ಯಾಸ, ವರ್ಣವಿನ್ಯಾಸ, ಮೈವಳಿಕೆ, ಯಥಾದರ್ಶನ, ಶೈಲಿ ಮುಂತಾದ ಅಂಶಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಶೀಗಿ ಚಿತ್ರಕಲೆಯ ಶೈಲಿಯು ಅಪ್ಪಟ ಗ್ರಾಮೀಣ (ಜನಪದ) ಶೈಲಿಯಾಗಿದ್ದು ಪ್ರದೇಶ ದಿಂದ ಪ್ರದೇಶಕ್ಕೆ ವ್ಯತ್ಯಾಸಗೊಳ್ಳುತ್ತದೆ. ಹಾಗೆಯೆ ರಚನಾಕಾರರ ಸಾಮರ್ಥ್ಯ, ಅನುಭವ, ತಕ್ಷಣದ ಪತಿಕ್ರಿಯೆ, ಇವುಗಳು ಶೀಗಿ ಚಿತ್ರಕಲಾ ಶೈಲಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಪಾಶ್ಚಾತ್ಯ ಪ್ರಭಾವದಿಂದ ಪ್ರೇರಿತವಾದ ಚಿತ್ರಕಲಾ ಶೈಲಿಯಲ್ಲಿ ಕಂಡು ಬರುವ, ಯಥಾದರ್ಶನ ನಿಯಮಗಳು ಇಲ್ಲಿ ಕಾಣ ಸಿಗುವುದಿಲ್ಲ. ಬದಲಾಗಿ ಭಾವನಾತ್ಮಕ ನಿರೂಪಣೆಯ ವಿನ್ಯಾಸಗಳು ರೂಪುಗೊಂಡಿರುತ್ತವೆ.


ಇತ್ತೀಚಿನ ದಿನಗಳಲ್ಲಿ ಚಿತ್ರಕಲೆಯಲ್ಲಿ ಪ್ರಮುಖವಾಗಿರುವ ಅಂಶಗಳಲ್ಲಿ ಒಂದಾದ ಸ್ಟ್ರಕ್ಚರ್ ಅಥವಾ ಮೈವಳಿಕೆಯು ಶೀಗಿ ಚಿತ್ರಗಳಲ್ಲಿ ಸಹಜವಾಗಿಯೇ ರೂಪಿತಗೊಂಡಿರುತ್ತದೆ.




ಮಣ್ಣಿನ ಮಡಿಕೆಯ ಮೇಲೆ ಶೀಗಿಚಿತ್ರ



ಬಿದಿರು ಬುಟ್ಟಿಯ ಮೇಲೆ ಶೀಗಿಚಿತ್ರ ಬಿಡಿಸುತ್ತಿರುವ ಮಹಿಳೆ



ಮೊದಲನೆಯ ದಿನದ ಶೀಗಿಚಿತ್ರ (ಹೊರಗೋಡೆ)




ಎರಡನೆಯ ದಿನದ ಶೀಗಿಚಿತ್ರ (ಹೊರಗೋಡೆ)



ಮಣ್ಣಿನ ಮಡಿಕೆಯ ಮೇಲೆ ಶೀಗಿಚಿತ್ರ



ಮಣ್ಣಿನ ಮಡಿಕೆಯ ಮೇಲೆ ಶೀಗಿಚಿತ್ರ




ಆರು ದಿನಗಳ ಶೀಗಿಚಿತ್ರಗಳು (ಹೊರಗೋಡೆ)




ಏಳನೆಯ ದಿನ ಬಣ್ಣದಿಂದ ಶೀಗಿಚಿತ್ರ ರಚನೆ (ಹೊರಗೋಡೆ)





ನಾಲ್ಕನೆಯ ದಿನದ ಶೀಗಿಚಿತ್ರ (ಒಳಗೋಡೆ)




ಐದನೆಯ ದಿನದ ಶೀಗಿಚಿತ್ರ (ಒಳಗೋಡೆ)




ಆರನೆಯ ದಿನದ ಶೀಗಿಚಿತ್ರ (ಒಳಗೋಡೆ)




ಏಳನೆಯ ದಿನ ಬಣ್ಣದಿಂದ ಶೀಗಿಚಿತ್ರ ರಚನೆ (ಒಳಗೋಡೆ)




ಏಳು ದಿನದ ಶೀಗಿಚಿತ್ರಗಳು (ಹೊರಗೋಡೆ)




ಮೊದಲನೆಯ ದಿನದ ಶೀಗಿಚಿತ್ರ (ಒಳಗೋಡೆ)




ಎರಡನೆಯ ದಿನದ ಶೀಗಿಚಿತ್ರ (ಒಳಗೋಡೆ)



ಮೂರನೆಯ ದಿನದ ಶೀಗಿಚಿತ್ರ (ಒಳಗೋಡೆ)



ಮೂರನೆಯ ದಿನದ ಶೀಗಿಚಿತ್ರ (ಹೊರಗೋಡೆ)



ನಾಲ್ಕನೆಯ ದಿನದ ಶೀಗಿಚಿತ್ರ (ಹೊರಗೋಡೆ)



ಬಿದಿರುಬುಟ್ಟಿಯ ಹೊರಬಾಗದಲ್ಲಿ ಶೀಗಿಚಿತ್ರ



ಬಿದಿರು ಬುಟ್ಟಿಗಳ ಮೇಲೆ ಶೀಗಿಚಿತ್ರ

ಗೋಡೆಯ ಮೇಲೆ ರಚನೆಯಾಗುವ ಶೀಗಿ ಚಿತ್ರಗಳಲ್ಲಿ ಗೋಡೆಯ ಕಲ್ಲು, ಮಣ್ಣು, ಸಿಮೆಂಟ್, ಗಚ್ಚು, ಗಾರೆಗಳಂತಹ ವಿವಿಧ ವಸ್ತುಗಳ ಹಿನ್ನೆಲೆ ದೊರಕುವುದರಿಂದ, ಮೈವಳಿಕೆಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಅದೇ ರೀತಿಯಲ್ಲಿ ಮಣ್ಣಿನ ಗಡಿಗೆ, ಬಿದಿರು ಬುಟ್ಟಿಗಳ ಮೇಲಿನ ಶೀಗಿ ಚಿತ್ರಗಳಿಗೆ ವಿಶಿಷ್ಟವಾದ ಮೈವಳಿಕೆ ಉಂಟಾಗಿ ಅತ್ಯಂತ ಸುಂದರವಾಗಿ ಕಂಗೊಳಿಸುತ್ತವೆ.

ವರ್ಣವಿನ್ಯಾಸದ ಹಿನ್ನೆಲೆಯಲ್ಲಿಯೂ ಸಹಿತ ಶೀಗಿ ಚಿತ್ರಗಳು ಗಮನ ಸೆಳೆಯುತ್ತವೆ. ಕೆಂಪು, ಕಪ್ಪು, ಹಳದಿ, ಕಂದುಗೆಂಪು, ಬಿಳಿ, ಹಸಿರು, ನೀಲಿ ಬಣ್ಣಗಳು ಇಲ್ಲಿ ಪ್ರಮುಖವಾಗಿ ಬಳಕೆಗೊಂಡಿವೆ. ಬೀದರ ಭಾಗದಲ್ಲಿ ಹೊರಗೋಡೆಯ ಮೇಲೆ ರಚಿಸುವ ಶೀಗಿ ಚಿತ್ರಕಲೆಯ ವರ್ಣವಿನ್ಯಾಸದಲ್ಲಿ ವೈವಿಧ್ಯತೆಗಳಿವೆ. ಇಲ್ಲಿ ಮೊದಲ ಆರುದಿನಗಳು ಗೋಡೆಯ ಮೇಲೆ ಸಗಣಿಯಿಂದ ಚಿತ್ರವಿನ್ಯಾಸ ರೂಪಿಸಲಾಗುತ್ತದೆ. ಸಗಣಿಯ ಮಂದಹಸಿರು ಬಣ್ಣದ ಚಿತ್ರಗಳು ಗೋಡೆಯಿಂದ ಹೊರಬಂದಂತೆ ತೋರುತ್ತವೆ. ಅವುಗಳಿಗೆ ಚುಚ್ಚಿದ ಬಣ್ಣ ಬಣ್ಣದ ಹೂಗಳು ಸಗಣಿಯ ಮಂದ ಹಸಿರಿನೊಂದಿಗೆ ಬೆರೆತುಕೊಂಡು ಹಸಿರು ಕಾಡಿನಲ್ಲಿ ಹೂಗಳು ಅರಳಿದಂತೆ ಕಂಗೊಳಿಸುತ್ತವೆ.

ಏಳನೆಯ ದಿನದ ಚಿತ್ರವನ್ನು ಬಣ್ಣಗಳಿಂದ ಬರೆಯಲಾಗುತ್ತಿದ್ದು, ಇಲ್ಲಿ ಚಪ್ಪಟೆಯಾಗಿ ವರ್ಣಲೇಪಿಸುವುದು ಮತ್ತು ವರ್ಣದಿಂದ ರೇಖಾಚಿತ್ರ ರಚಿಸುವ ತಂತ್ರಗಾರಿಕೆಗಳು ಬಳಕೆಯಾಗುತ್ತವೆ. ವರ್ಣ ವಿನ್ಯಾಸದಲ್ಲಿ ಯಾವುದೇ ರೀತಿಯ ಸ್ಟ್ರಕ್ಚರ್ ಅಥವಾ ನೆರಳು ಬೆಳಕಿನ ವಿನ್ಯಾಸವನ್ನು ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ. ಆದರೂ ಕಲಾವಿದರ ವರ್ಣಲೇಪನದ ಶೈಲಿ, ವೇಗ ಮತ್ತು ಆ ಗೋಡೆಯ ಹಿನ್ನೆಲೆಗಳು, ಬಳಸಿದ ಕುಂಚಗಳಿಂದ ಸ್ವಲ್ಪ ಪ್ರಮಾಣದ ಸ್ಟ್ರಕ್ಚರ್, ನೆರಳು ಬೆಳಕಿನ ವಿನ್ಯಾಸಗಳು ಕಂಡುಬರುತ್ತವೆ.

ಮನೆಯ ಒಳಗೋಡೆಯಲ್ಲಿ ಬರೆಯುವ ಶೀಗಿ ಚಿತ್ರಕಲೆಯಲ್ಲಿ ವರ್ಣವಿನ್ಯಾಸವು ಉಜ್ವಲವಾಗಿರುವುದು. ಇಲ್ಲಿ ಕಂದುಗೆಂಪು, ನೀಲಿ, ಹಸಿರು ಬಣ್ಣಗಳು ಹೆಚ್ಚಾಗಿ ಬಳಸಲ್ಪಡುತ್ತವೆ. ವರ್ಣದಿಂದ ರೇಖಾಚಿತ್ರ ರಚಿಸುವುದು, ಚಪ್ಪಟೆಯಾಗಿ ಬಣ್ಣ ತುಂಬುವುದು, ಮತ್ತು ಅಲ್ಪಸ್ವಲ್ಪ ಪ್ರಮಾಣದಲ್ಲಿ ನೆರಳು ಬೆಳಕಿನ ವಿನ್ಯಾಸ ರೂಪಿಸುವುದು ಇಲ್ಲಿನ ವರ್ಣವಿನ್ಯಾಸದಲ್ಲಿ ಗೋಚರಿಸುತ್ತದೆ.

ಬಿದಿರು ಬುಟ್ಟಿಗಳ ಮೇಲೆ ರಚಿಸುವ ಶೀಗಿ ಚಿತ್ರಕಲೆಯಲ್ಲಿ ಆಕರ್ಷಕವಾದ ವರ್ಣವಿನ್ಯಾಸವಿದೆ. ಸಗಣಿಯ ಮಂದ ಹಸಿರು, ಹುರಿಮಂಜಿನ ಕಂದುಗೆಂಪು, ಸುಣ್ಣದ ಬಿಳಿ ವರ್ಣಗಳೇ ಇಲ್ಲಿ ಪ್ರಧಾನವಾಗಿ ಬಳಕೆಯಾದರೂ ಅವುಗಳನ್ನು ಹದವರಿತು ಬಳಸುವ ವಿಧಾನ ದಿಂದ ಅವು ಹೆಚ್ಚು ಆಕರ್ಷಕವಾಗಿ ಕಂಡು ಬರುತ್ತವೆ.

ಬಿದಿರು ಬುಟ್ಟಿಗೆ ಸಗಣಿಯನ್ನು ಸಾರಿಸಿ ಅದರ ಮೇಲೆ ಹುರಿಮಂಜು ಮತ್ತು ಸುಣ್ಣದಿಂದ ಚಿತ್ರಗಳನ್ನು ಬರೆಯುವುದರಿಂದ ಮಂದ ಹಸಿರು ವರ್ಣದ ಹಿನ್ನೆಲೆಯಲ್ಲಿ ಅಚ್ಚಬಿಳಿ ಮತ್ತು

ಕಂದುಗೆಂಪು ಬಣ್ಣದ ಚಿತ್ರಗಳು ಅತ್ಯಂತ ಮೋಹಕವಾಗಿ ಕಂಗೊಳಿಸುತ್ತವೆ. ಇಲ್ಲಿ ಬುಟ್ಟಿಯ ಮೇಲೆ ರೇಖಾಕೃತಿಯ ವರ್ಣಚಿತ್ರಗಳಿಗಿಂತ ಹೆಚ್ಚಾಗಿ ಚಪ್ಪಟೆಯಾಗಿ ವರ್ಣಲೇಪಿಸಿದ ಆಕೃತಿಗಳನ್ನು ರಚಿಸುತ್ತಾರೆ. ವರ್ಣ ಸಂಯೋಜನೆ ಅತ್ಯಂತ ಸುಂದರವಾಗಿ ಇಲ್ಲಿ ಮೂಡಿ ಬಂದಿದೆ.

ಇದೇ ಮಾತನ್ನು ಮಣ್ಣಿನ ಗಡಿಗೆ(ಪಾತ್ರೆ)ಯ ಮೇಲೆ ಚಿತ್ರಿಸುವ ಶೀಗಿ ಚಿತ್ರಕಲೆಗೂ ಅನ್ವಯಿಸಬಹುದು. ಅತ್ಯಂತ ಸಹಜವಾದ ಕಪ್ಪು ಹಿನ್ನೆಲೆ ಮೇಲೆ ಬಿಳಿಯ ಸುಣ್ಣ ಮತ್ತು ಕೆಮ್ಮಣ್ಣಿನಿಂದ ರಚಿಸಲಾಗುವ ಚಿತ್ರಗಳು ಆಕರ್ಷಕವಾಗಿ ಕಂಡುಬರುತ್ತವೆ.

ಕಲ್ಲಿನ ಗುಂಡುಗಳ ಮೇಲೆ ಬರೆಯುವ ಶೀಗಿ ಚಿತ್ರಕಲೆಯಲ್ಲಿ ಕಲ್ಲಿನ ಸಹಜವಾದ ಕಂದು, ನಸುಗಪ್ಪು, ಬೂದು ಮುಂತಾದ ವರ್ಣಗಳು ಅವುಗಳ ಮೇಲೆ ಬರೆಯುವ ಸುಣ್ಣ ಮತ್ತು ಕೆಮ್ಮಣ್ಣಿನ ಚಿತ್ರಗಳಿಗೆ ಸೂಕ್ತವಾದ ಹಿನ್ನೆಲೆ ಲೇಪನದ ವರ್ಣವನ್ನು ಒದಗಿಸಿಕೊಡುತ್ತವೆ. ಇಲ್ಲಿ ಚಿತ್ರಗಳಿಗೆ ದಪ್ಪನಾಗಿ ಬಣ್ಣ ಲೇಪಿಸುವ ಮೂಲಕ ವರ್ಣ ವಿನ್ಯಾಸ ಮಾಡುತ್ತಾರೆ.

ಶೀಗಿ ಚಿತ್ರಕಲೆಯಲ್ಲಿ ರೇಖಾವಿನ್ಯಾಸಗಳದೇ ಒಂದು ವಿಶೇಷ ಸೊಬಗು. ಜನಪದ ಚಿತ್ರಕಲೆಯ ಜೀವಾಳವಾಗಿರುವ ದಪ್ಪನಾದ ಶಕ್ತಿಯುತ ಜೀವಂತ ರೇಖೆಗಳು ಇಲ್ಲಿ ಮನ ಸೆಳೆಯುತ್ತವೆ. ಹೊರಗೋಡೆಯ ಮೇಲೆ ಶೀಗಿ ಚಿತ್ರ ರಚಿಸುವ ವಿಧಾನದಲ್ಲಿ ಏಳನೆಯದಿನ ರೇಖೆಯ ಸೊಬಗು ಕಂಡುಬಂದರೆ ಉಳಿದ ಪ್ರಕಾರಗಳಲ್ಲಿ ಪ್ರತಿನಿತ್ಯ ರೇಖಾಲಾವಣ್ಯ ಕಂಗೊಳಿಸುತ್ತದೆ. ಒಳಗೋಡೆಯಲ್ಲಿ ಮಾಡಿನ ಸುತ್ತಲೂ ಬರೆಯುವ ಶೀಗಿ ಚಿತ್ರಗಳಲ್ಲಿ ಪ್ರತಿಯೊಂದು ಆಕೃತಿಗಳು ರೇಖಾ ಪ್ರಧಾನವಾಗಿವೆ. ಅಲ್ಲದೇ ಕೆಲವು ಚಿತ್ರಗಳನ್ನು ಮೊದಲಿಗೆ ರೇಖಾವಿನ್ಯಾಸದಿಂದ ರೂಪಿಸಿಕೊಂಡು ಅನಂತರವೇ ವರ್ಣಲೇಪನ ಮಾಡಲಾಗುತ್ತದೆ.

ಬಿದಿರು ಬುಟ್ಟಿ ಮತ್ತು ಮಣ್ಣಿನ ಪಾತ್ರೆಗಳ ಮೇಲೆ ರಚಿಸುವ ಶೀಗಿ ಚಿತ್ರಗಳ ಸೌಂದರ್ಯ, ಜೀವಂತಿಕೆ, ಅವುಗಳ ರೇಖಾ ವಿನ್ಯಾಸದಲ್ಲಿದೆ.

ಚಿತ್ರಕಲೆಯ ಪ್ರಮುಖ ಅಂಶಗಳಲ್ಲಿ ಒಂದಾದ ಸಂಯೋಜನೆಯು ಶೀಗಿ ಚಿತ್ರಕಲೆಯಲ್ಲಿ ಲಭ್ಯ ಸ್ಥಳಾವಕಾಶ, ಕಲಾವಿದರ ಸಾಮರ್ಥ್ಯ, ಪರಿಕರಗಳು ಮತ್ತು ಬಳಸುವ ಆಕಾರ, ವಿನ್ಯಾಸಗಳಿಗನುಸಾರವಾಗಿ ನಿರ್ಧಾರಿತವಾಗುತ್ತದೆ. ಹೊರಗೋಡೆಯಲ್ಲಿ ರಚಿಸುವ ಶೀಗಿ ಚಿತ್ರಕಲೆಯಲ್ಲಿ ಚೌಕ, ತ್ರಿಕೋನ, ನಕ್ಷತ್ರಾಕಾರ, ಆಯತ ಮುಂತಾದ ವಿನ್ಯಾಸಗಳಲ್ಲಿ ಚಿತ್ರಗಳನ್ನು ಸಂಯೋಜನೆ ಗೊಳಿಸಲಾಗುತ್ತದೆ. ಮೊದಲಿನ ಆರು ದಿನಗಳು ಪ್ರತಿದಿವಸ ಎರಡು ಅಥವಾ ಮೂರು ಆಕೃತಿಗಳನ್ನು ರಚಿಸಲಾಗುತ್ತದೆ.

ಇಲ್ಲಿ ಮೇಲೆ ಹೇಳಲಾದ ಯಾವುದೇ ಒಂದು ವಿನ್ಯಾಸದಲ್ಲಿ ಆಕೃತಿಗಳನ್ನು ಮಧ್ಯದಲ್ಲಿ ಇಲ್ಲವೆ ಸ್ವಲ್ಪ ಕೆಳಭಾಗದಲ್ಲಿ ರಚಿಸಲಾಗುತ್ತದೆ. ಏಳನೆಯದಿನ ಹೆಚ್ಚಿನ ಚಿತ್ರಗಳನ್ನು ರಚಿಸುವುದರಿಂದ ಎಲ್ಲೆಂದರಲ್ಲಿ ಆಕೃತಿಗಳು ಚದುರಿದಂತೆ ರಚಿಸಲಾಗಿರುತ್ತದೆ. ಆದರೂ ಸಹಿತ ಅವು ಅನಿಯಮಿತ ವಿನ್ಯಾಸದಲ್ಲಿಯೂ ಒಂದು ಬಗೆಯ ಸಂಯೋಜನೆಗೆ ಒಳಪಟ್ಟು ಸುಂದರವಾಗಿ ಕಂಡುಬರುತ್ತವೆ.

ಬಿದಿರು ಬುಟ್ಟಿ ಮತ್ತು ಮಣ್ಣಿನ ಪಾತ್ರಗಳ ಮೇಲೆ ರಚಿಸುವ ಶೀಗಿ ಚಿತ್ರಕಲೆಯ ಸಂಯೋಜನೆಯು ಆಕರ್ಷಕ ವಿನ್ಯಾಸದಿಂದ ಕೂಡಿದೆ. ಬುಟ್ಟಿ ಮತ್ತು ಗಡಿಗೆಗಳ ಉಬ್ಬು ಹಿನ್ನೆಲೆಯಲ್ಲಿ ಅವುಗಳ ಮಧ್ಯ ಭಾಗದಲ್ಲಿ ಬಳೆಯಂತೆ ಸುತ್ತಲೂ ಚಿತ್ರಗಳನ್ನು ರಚಿಸುತ್ತಾರೆ. ಮಧ್ಯದಲ್ಲಿ ದೊಡ್ಡ ದೊಡ್ಡ ಆಕಾರಗಳನ್ನು ರಚಿಸಿ ಮೇಲೆ ಮತ್ತು ಕೆಳಗೆ ಚಿಕ್ಕ ಆಕೃತಿಗಳನ್ನು ರೂಪಿಸುತ್ತಾರೆ. ಅದರ ಮೇಲೆ ಮತ್ತು ಕಾಲಿ ಸ್ಥಳದಲ್ಲಿ ಹೂ ಬಳ್ಳಿಯ ನಕ್ಷೆಗಳನ್ನು ಚಿತ್ರಿಸುವುದು ಒಟ್ಟು ಸಂಯೋಜನೆಯ ಅಂದವನ್ನು ಹೆಚ್ಚಿಸುತ್ತದೆ.

ಕಲ್ಲಿನ ಗುಂಡುಗಳ ಮೇಲಿನ ಚಿತ್ರಗಳಲ್ಲಿ ಆಯಾಕಲ್ಲಿನ ಆಕಾರಗಳಿಗೆ ತಕ್ಕಂತೆ ಸಣ್ಣ, ದೊಡ್ಡ ರೇಖಾಕೃತಿಗಳನ್ನು ರಚಿಸುವುದು, ಅವುಗಳನ್ನು ವರ್ಣದಿಂದ ತುಂಬುವುದು ಕಂಡು ಬರುತ್ತದೆ. ಈ ರೀತಿಯಲ್ಲಿ ಶೀಗಿ ಚಿತ್ರಕಲೆಯಲ್ಲಿ ಚಿತ್ರಕಲೆಯ ಪ್ರಮುಖ ಅಂಶಗಳು ಅಡಕವಾಗಿವೆ.

## ಸಮಾರೋಪ

ಶೀಗಿ ಚಿತ್ರಕಲೆಯ ಪರಿಶೀಲನೆಯಿಂದ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು. ಯಾವುದೇ ಕಲೆ ಆಯಾಕಾಲದ, ಪ್ರದೇಶದ ಜನರ ಸಮಷ್ಟಿ ಬದುಕಿನ ಪ್ರತಿಬಿಂಬವಾಗಿ, ಸಾಂಸ್ಕೃತಿಕ ಜೀವನದ ಪುರಾವೆಯಾಗಿ ಉಳಿಯುವ ಮೂಲಕ ಪರಂಪರೆಯ ಜೀವಶಕ್ತಿಯಾಗಿ ಪ್ರವಹಿಸುತ್ತದೆ. ಈ ಮಾತನ್ನು ಶೀಗಿ ಚಿತ್ರಕಲೆಗೂ ಅನ್ವಯಿಸಬಹುದು.

ಪ್ರಮುಖವಾಗಿ ಆಚರಣೆಯ ಹಿನ್ನೆಲೆಯಲ್ಲಿ ರಚನೆಯಾಗುವ ಶೀಗಿ ಚಿತ್ರಕಲೆಯು ನಿರ್ದಿಷ್ಟ ಸಮಯ ಸಂದರ್ಭಗಳಲ್ಲಿ ರೂಪು ತಾಳುತ್ತದೆ. ಶೀಗಿ ಚಿತ್ರಕಲಾವಿದರು ತಮ್ಮ ಚಿತ್ರಗಳಿಗಾಗಿ ವಸ್ತುವಿಷಯಗಳನ್ನು ತಮ್ಮ ಸುತ್ತಲಿನ ಪರಿಸರ, ನಿತ್ಯಜೀವನಗಳಿಂದ ಆಯ್ದು ಕೊಳ್ಳುತ್ತಾರೆ. ಇವರ ಚಿತ್ರವಿನ್ಯಾಸಗಳನ್ನು ಮೂರು ಬಗೆಯಲ್ಲಿ ವಿಂಗಡಿಸಬಹುದು.

ಮೊದಲನೆಯದು ಸುತ್ತಲಿನ ನಿಸರ್ಗ, ಎರಡನೆಯದು ತಮ್ಮ ವೃತ್ತಿ ವ್ಯವಸಾಯ, ಮೂರನೆಯದು ತಮ್ಮ ಧಾರ್ಮಿಕ ನಂಬುಗೆ ಆಧರಿಸಿ ಚಿತ್ರಗಳು ರಚನೆಗೊಂಡಿವೆ. ಶೀಗಿ ಚಿತ್ರಕಲೆ ಜನಪದರ ಅಭಿರುಚಿ, ಕಲಾಭಿವ್ಯಕ್ತಿಯ ಪ್ರತೀಕವಾಗಿದೆಯಲ್ಲದೇ ಅವರ ಜೀವನಾನುಭವದ ವಿವರಗಳನ್ನು ಒಳಗೊಂಡಿದೆ. ತಾವು ಕಂಡುಂಡದ್ದನ್ನೇ ಚಿತ್ರಗಳ ಚೌಕಟ್ಟಿನೊಳಗೆ ತಂದು ಅವುಗಳನ್ನು ಒಂದು ಉದ್ದೇಶಕ್ಕಾಗಿ ಬಳಸಿಕೊಳ್ಳುವ ಇಂತಹ ಚಿತ್ರಗಳ ಹಿಂದೆ ಗ್ರಾಮೀಣ ಜನರ ಮುಗ್ಧ ಮನಸ್ಸಿದೆ. ಶೀಗಿ ಚಿತ್ರಕಲೆಯಲ್ಲಿ ಗ್ರಾಮೀಣರ ಆಸಕ್ತಿ ಶ್ರದ್ಧೆಗಳನ್ನು ಕಾಣುವಂತೆಯೇ, ಭಾವ ತೀವ್ರತೆ, ಕಲಾವಂತಿಕೆಯನ್ನೂ ಗುರುತಿಸಬಹುದು.

ಶೀಗಿ ಚಿತ್ರಕಲೆ ಸಂಕೇತ ಪ್ರಧಾನವಾದುದು. ಇಲ್ಲಿನ ಸೂರ್ಯ ಚಂದ್ರರ ಚಿತ್ರಗಳು ಜೀವನದ ಕತ್ತಲು, ಬೆಳಕು, ಸುಃಖ, ದುಃಖಗಳನ್ನು ಪ್ರತಿನಿಧಿಸುವಂತೆಯೇ ಹೊಸಹುಟ್ಟು ಮತ್ತು ಮರಣ, ಬದುಕಿನ ಸಂತುಷ್ಟತೆಗಳನ್ನೂ ತೋರಿಸುತ್ತವೆ. ಗಿರಿ ಶಿಖರ, ಬೆಟ್ಟಗುಡ್ಡಗಳು

ಔನ್ನತ್ಯವನ್ನು, ನದಿ, ಬಾವಿ, ಸಮುದ್ರ ಅವುಗಳಲ್ಲಿನ ನೀರು ವೈಶಾಲ್ಯತೆಯನ್ನು ಬಿಂಬಿಸುತ್ತವೆ. ದೈನಂದಿನ ಉಪಕರಣಗಳಾದ ಕೂಡ್ರುವ ಮನೆ ಸ್ಥಾನಮಾನವನ್ನು, ಏಣಿಯು ಹಂತಹಂತವಾಗಿ ಮೇಲೇರುವ ಅಭೀಪ್ಸೆಯನ್ನು ವ್ಯಕ್ತಪಡಿಸುತ್ತವೆ.

ಸ್ವಸ್ತಿಕ ಮತ್ತು ವಿವಿಧ ರೀತಿಯ ಮಂಡಲಗಳು ಪವಿತ್ರತೆಯ ಭಾವನೆಯನ್ನು ಹೊಂದಿದ್ದರೆ, ರಾಮನ ತೊಟ್ಟಿಲು ಸಂತಾನೋತ್ಪತ್ತಿ ಶಕ್ತಿಯನ್ನು ಹೊಂದುವದಾಗಿದೆ. ಹಾಗೆಯೇ ಹಾವು ಕಾಮ ಮತ್ತು ಫಲವಂತಿಕೆಯ ಸಂಕೇತವಾಗಿದೆ. ಹೀಗೆ ಶೀಗಿ ಚಿತ್ರಗಳ ಮೂಲಕ ಜನಪದರು ತಮ್ಮ ಬದುಕಿನ ವಿವಿಧ ಮುಖಗಳ ಭಾವನಾತ್ಮಕ ಅಭಿವ್ಯಕ್ತಿಯನ್ನು ಬಿಂಬಿಸುವಂತೆಯೇ, ನಾಡಿನ ಸಂಸ್ಕೃತಿಗೆ ಅಮೂಲ್ಯ ಕೊಡುಗೆ ಕೊಟ್ಟಿದ್ದಾರೆ ಎಂದರೆ ತಪ್ಪಲ್ಲ.

ಕರ್ನಾಟಕದ ಪ್ರಮುಖ ಜನಪದ ಕಲಾ ಪ್ರಕಾರವಾದ ಶೀಗಿ ಚಿತ್ರಕಲೆಯು ಆಧುನಿಕತೆಯ ಪ್ರಭಾವದಿಂದ ಮರೆಯಾಗಿ ಹೋಗುತ್ತಿದೆ. ನಮ್ಮ ನಾಡಿನ ಚಿತ್ರಕಲಾ ಕ್ಷೇತ್ರದ ಮೂಲ ಬೇರುಗಳಂತಿರುವ ಇಂತಹ ಕಲಾಪ್ರಕಾರಗಳನ್ನು ಒಂದೆಡೆಗೆ ದಾಖಲಿಸುವ ಕಾರ್ಯ, ಅವುಗಳನ್ನು ಹಲವಾರು ನಿಟ್ಟಿನಿಂದ ಅಧ್ಯಯನ ಮಾಡುವ ಕಾರ್ಯ, ಉಪಯುಕ್ತವಾದವುಗಳನ್ನು ಉಳಿಸಿಕೊಂಡು ಬೆಳೆಯಿಸುವ ಕೆಲಸಗಳು ಆಗಬೇಕಾಗಿವೆ.

## ಶೀಗಿ ಹಾಡುಗಳು

ಶೀಗಿ ಹಾಡುಗಳು ಅನೇಕ ರೀತಿಯಲ್ಲಿ ಇರುತ್ತವೆ. ಹಾಗೇ ಶೀಗಿ ಆಚರಣೆಯ ವಿವಿಧ ಸಂದರ್ಭಗಳಲ್ಲಿ ಹಾಡಲಾಗುತ್ತದೆ. ಶೀಗಿ ಆಚರಣೆಯ ಪ್ರಯುಕ್ತ ಶೀಗವ್ವನನ್ನು ಆಮಂತ್ರಿಸುವಲ್ಲಿಂದ ಹಿಡಿದು ಶೀಗಿಮೂರ್ತಿಗಳನ್ನು ಮಾಡಿ ಪೂಜಿಸುವುದು, ಆರತಿ ಬೆಳಗುವುದು, ಶೀಗಿ ಸಂದರ್ಭದ ಚಿತ್ರವಿನ್ಯಾಸ ಮತ್ತು ಅಲಂಕಾರ ಮಾಡುವುದು, ಶೀಗಿಯನ್ನು ಕಳಿಸುವುದು ಹೀಗೆ ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಹಾಡುಗಳನ್ನು ಹೆಂಗಳೆಯರು ಹಾಡುತ್ತಾರೆ.

ಚಿತ್ರವಿನ್ಯಾಸ ಮತ್ತು ಅಲಂಕಾರ ಮಾಡುವಾಗಲಂತೂ ಪ್ರತಿಯೊಂದು ಚಿತ್ರಗಳಿಗೂ ಪ್ರತ್ಯೇಕವಾದ ಹಾಡುಗಳನ್ನು ಹಾಡುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಶೀಗಿ ಆಚರಣೆಯ ಕೆಲವು ಹಾಡುಗಳನ್ನು ಇಲ್ಲಿ ಗಮನಿಸಬಹುದು.

### ಶೀಗಮ್ಮನಿಗೆ ಆಮಂತ್ರಣ ಕೊಡುವ ಹಾಡು

ಶೀಗಿ ಹುಣ್ಣಿಮೆಯು ಏಳುದಿನ ಇರುವಾಗಲೇ ಹೆಂಗಳೆಯರೆಲ್ಲಾ ಶೀಗಿ ಆಚರಣೆಗೆ ತಯಾರಿ ನಡೆಸುತ್ತಾರೆ. ಶೀಗವ್ವನನ್ನು ಮಣ್ಣಿನಿಂದ ತಯಾರಿಸುವುದು ಇಲ್ಲವೆ ಕುಂಬಾರರು, ಅಕ್ಕಸಾಲಿಗರು, ಅಥವಾ ಸ್ವಾಮಿಗಳ ಮನೆಯಿಂದ ತರಲಾಗುತ್ತದೆ. ಇದಕ್ಕೆ ಮೊದಲೇ ಶೀಗವ್ವನನ್ನು ಆಮಂತ್ರಿಸುವ ಹಾಡುಗಳನ್ನು ಹಾಡುತ್ತಾರೆ.

ಕುತನೀ ಧಾರಿ ಕುಬ್ಬಸತೊಟ್ಟು ಕುಂಕುಮಬಟ್ಟು ಹಣೆಮ್ಯಾಲಿಟ್ಟು
ವಾಲಿಕಪ್ಪುಕಿವಿಯಲ್ಲಿಟ್ಟು ಒಲುಮೆಯಿಂದ ಕರೆಯಬಂದೆ
ಮನಿಗಿ ನಡಿಯಮ್ಮ | ಶೀಗಿ ಮನಿಗಿ ನಡಿಯಮ್ಮ

ಕೆತ್ತಿದ ಪಿಲ್ಲೆ ಕಾಲಲ್ಲಿಟ್ಟು ನಾಕಡಾಬು ನಡುವಿಗಿಟ್ಟು
ಕರಡಿ ಮಜಲು ತಕ್ಕೊಂಡು ಹರುಷದಿಂದ ಕರೆಯಬಂದೆ
ಮನಿಗಿ ನಡಿಯಮ್ಮ | ಶೀಗಿ ಮನಿಗಿ ನಡಿಯಮ್ಮ

ಕಂಚಿನ ಕಳಸ ತುಂಬಿ ಇಟ್ಟು ಕೆಂಚನಾಂವಂದ್ಯೆವರು
ಸತಿಪತಿಕೂಡಿ ಹರುಷದಿಂದ ಕರೆಯಬಂದೆ
ಮನಿಗಿ ನಡಿಯಮ್ಮ | ಶೀಗಿ ಮನಿಗಿ ನಡಿಯಮ್ಮ

ಪೀತಂಬರ ಸೀರೆಉಟ್ಟು ಜರತಾರಿ ಕುಬ್ಬಸತೊಟ್ಟು
ಬಂಗಾರ ಡಾಬು ನಡುವಿಗಿಟ್ಟು ಹರುಷದಿಂದ ಕರೆಯಬಂದೆ
ಮನಿಗಿ ನಡಿಯಮ್ಮ | ಶೀಗಿ ಮನಿಗಿ ನಡಿಯಮ್ಮ

## ಪೂಜೆಯ ಹಾಡುಗಳು

ಶೀಗವ್ವನನ್ನು ಆಮಂತ್ರಣಕೊಟ್ಟು ಕರೆದುಕೊಂಡು ಬಂದ ನಂತರ ಆಕೆಯ ಮೂರ್ತಿಗಳನ್ನು ಇಟ್ಟು ಪೂಜಿಸುತ್ತಾರೆ. ಬೀದರ ಭಾಗದ ಕಡೆಗೆ ಮನೆಯ ಹೊರಭಾಗದ ಗೋಡೆಯ ಮೇಲೆ ವಿವಿಧ ರೀತಿಯ ಚಿತ್ರ ಶಿಲ್ಪ ಕೃತಿಗಳನ್ನು ಏಳುದಿನಗಳವರೆಗೆ ರಚನೆ ಮಾಡಿ ಅವುಗಳನ್ನೇ ಪೂಜಿಸುತ್ತಾರೆ.

ಹೀಗೆ ವಿವಿಧ ಸಂದರ್ಭದಲ್ಲಿ ಶೀಗಿಯನ್ನು ಪೂಜಿಸುವಾಗ ಅನೇಕ ರೀತಿಯ ಹಾಡುಗಳನ್ನು ಹಾಡಲಾಗುತ್ತದೆ. ಇದರಲ್ಲಿ ತಮ್ಮ ಮನೆ ದೇವರು, ಇಷ್ಟದೈವ, ಆ ಭಾಗದ ಪ್ರಖ್ಯಾತವಾದ ಧಾರ್ಮಿಕ ಸ್ಥಳ ಸಂತರು, ಮಹಾತ್ಮರು, ಶರಣರು ಕುರಿತಾಗಿ ಪೂಜೆಯ ಹಾಡುಗಳ ಇರುತ್ತವೆ.

ಒಂದ ಸೌಟವ್ವ ಎಣ್ಣೆಯ ತಂದು
ಒಂದ ಜೋಡವ್ವ ಬತ್ತೀಯ ಮಾಡಿ
ಒಂದ ಸೇರಕ್ಕಿ ಶೀಗಿಗೆ ತುಂಬಿ
ನಾರಿಯರೆಲ್ಲ ಸೇರಿ ಪೂಜೆಯಮಾಡಿ

ಎರಡ ಸೌಟವ್ವ ಎಣ್ಣೆಯ ತಂದು
ಎರಡ ಜೋಡವ್ವ ಬತ್ತೀಯ ಮಾಡಿ

ಎರಡ ಸೇರಕ್ಕಿ ಶೀಗಿಗೆ ತುಂಬಿ
ನಾರಿಯರೆಲ್ಲ ಸೇರಿ ಪೂಜೆಯಮಾಡಿ

ಮೂರ ಸೌಟವ್ವ ಎಣ್ಣೆಯ ತಂದು
ಮೂರ ಜೋಡವ್ವ ಬತ್ತೀಯ ಮಾಡಿ
ಮೂರ ಸೇರಕ್ಕಿ ಶೀಗಿಗೆ ತುಂಬಿ
ನಾರಿಯರೆಲ್ಲ ಸೇರಿ ಪೂಜೆಯಮಾಡಿ

ಹೀಗೆ ಐದರವರೆಗೂ ಮುಂದುವರೆಯುತ್ತದೆ.

ನಾರಾಯಣಾ ನಿನ್ನ ನಾಮದ ಬೀಜವ
ನಾನೆಲ್ಲಿ ಬಿತ್ತಿ ಬೆಳೆಯಲಿ । ನಿನ್ನ ನಾಮ
ನಾಲೀಗಿ ಮೇಲೆ ಬೆಳೆದೇನೋ ॥

ಭಂತ್ನಾಳ ಶರಣಯ್ಯ ನಾ ನಿನ್ನ ಮಗಳಯ್ಯ
ಲೇಸಗಿತ್ತೆಯ್ಯ ಬಡವೆಯ್ಯ । ನನಮ್ಯಾಲ
ಸಾಸ್ಟಿ ಕಾಳಟ್ಟು ದಯವಿರಲಿ ॥

ಸೊಲ್ಲಾಪುರದ ಒಳಗ ಚಲ್ಯಾನ ಮಲ್ಲೀಗಿ
ಹಾಸುಮಂಚೆಲ್ಲ ಹವಳವ ಸಿದರಾಮನ
ದಂಡುಕೋಲೆಲ್ಲ ದವನವ ॥

ನಿದ್ದಿಗಣ್ಣೆಲಿ ಕಂಡ ಸುದ್ಧಗುರುವಿನ ಪಾದ
ಎದ್ದು ನೋಡಿದರ ನಿರಬಯಲ । ಗುರುರಾಯ
ರುದ್ದರನ ಮಹಿಮೆ ತಿಳಿಯಾದ ॥

ಶರಣರ ನೆನೆದರ ಸರಗೀಯ ಇಟ್ಟಂಗ
ಹವಳ ಮಲ್ಲಿಗಿ ಮುಡಿದಂಗ । ಕಲ್ಯಾಣ
ಶರಣರ ನೆನೆಯೋ ನನಮನವೆ ॥

ಆಕಲ್ಲ ಈಕಲ್ಲ ಹಸಿರು ಹಳದಿಯಕಲ್ಲ
ಹೆಸರಾದ ಕಲ್ಲ ಕೊಡೆಕಲ್ಲ । ಬಸವಗ
ಹಸಿರು ಗಲ್ಲೀಪ ಹೊಲಿಸೇನ ॥

ಕರುಣ ಬಂದರ ಕಾಯೋ ಮರಣ ಬಂದರೆ ಒಯ್ಯೋ
ಕರುಣಿ ಕಲ್ಯಾಣಿ ಬಸವಣ್ಣ | ಕಾಸಿಲಿಂಗ
ಕಡೆತನಕ ಕಾಯೋ ಅಭಿಮಾನ ||

## ಆರತಿ ಹಾಡುಗಳು

ಶೀಗವ್ವನಿಗೆ ಪೂಜೆಯನ್ನು ಮಾಡಿದ ನಂತರ ಎಲ್ಲ ಹೆಂಗಳೆಯರೂ ಆರತಿ ಬೆಳಗುತ್ತಾರೆ. ಈ ಸಂದರ್ಭದಲ್ಲಿಯೂ ವಿವಿಧ ರೀತಿಯ ಹಾಡುಗಳನ್ನು ಹಾಡುತ್ತಾರೆ.

ಮುತ್ತಿನ ಒಂದಾರ್ತಿ ಮಾಡಿ
ಮುತ್ತು ಮಾಣಿಕ ದಾರ್ತಿ ಮಾಡಿ
ಮಿತ್ರರೈವರು ಕೂಡಿ ದೀಪಬೆಳಗಿರೆ
ಶೀಗವ್ವಗ ಆರತಿ ಬೆಳಗಿರೆ

ಈ ರೀತಿಯಲ್ಲಿ ಈ ಮೇಲಿನ ಹಾಡಿನಲ್ಲಿ ಮುತ್ತು, ರತ್ನ, ಮಾಣಿಕ್ಯ, ಬಂಗಾರ, ಬೆಳ್ಳಿ, ಹವಳ, ರನ್ನ, ವಜ್ರ ಹೀಗೆ ಅನೇಕ ವಸ್ತುಗಳಿಂದ ಆರತಿ ಮಾಡಿ ಬೆಳಗುವ ಬಗ್ಗೆ ಹಾಡು ಮುಂದುವರಿಯುತ್ತದೆ.

ಮುತ್ತಿನಾರುತಿ ಎತ್ತಿ ಬೆಳಗಿರೆ
ಮೃತ್ಯುಂಜಯ ಸಖಿಗೆ | ಮತ್ತನಮ
ಬಾದಾಮಿ ಬನದೇವಿಗೆ

ಹೀಗೆ ಅನೇಕ ದೇವರಿಗೆ ಆರತಿ ಬೆಳಗುತ್ತ ಈ ಹಾಡು ಮುಂದು ವರಿಯುತ್ತದೆ. ಈ ಪ್ರಕಾರ ಹಲವಾರು ಹಾಡುಗಳನ್ನು ಆರತಿ ಬೆಳಗುವ ಸಂದರ್ಭದಲ್ಲಿ ಹಾಡಲಾಗುತ್ತದೆ.

## ಹೂವು, ಪತ್ರಿ ಹಾಕುವ ಹಾಡುಗಳು

ಹಿಂದೂ ಸಂಪ್ರದಾಯದಲ್ಲಿ ಯಾವುದೇ ಪೂಜಾ ಸಮಾರಂಭವಿರಲಿ ಅಲ್ಲಿ ಹೂವು, ಪತ್ರಿ, ಕಾಯಿ, ಕರ್ಪೂರಗಳ ಪಾತ್ರ ಪ್ರಮುಖವಾಗಿರುತ್ತದೆ. ಶಿಷ್ಟರು ಪೂಜಾ ಸಂದರ್ಭದಲ್ಲಿ ಈ ಹೂವು ಪತ್ರಿ ಮುಂತಾದವುಗಳನ್ನು ದೇವಿಗೆ ಅರ್ಪಿಸುವಾಗ ಸಂಬಂಧಿಸಿದ ಮಂತ್ರ ಹೇಳು ವಂತೆಯೇ ಜನಪದರು ಹಾಡುಗಳನ್ನು ಹಾಡುತ್ತಾರೆ. ಹೂವುಗಳನ್ನು ಮತ್ತು ಪತ್ರಿಯನ್ನು ಶೀಗವ್ವನಿಗೆ ಅರ್ಪಿಸುವಾಗ ಅವುಗಳ ಕುರಿತಾಗಿ ಇರುವ ಅನೇಕ ಹಾಡುಗಳನ್ನು ಹಾಡಲಾಗುತ್ತದೆ. ಅವುಗಳಲ್ಲಿ ಒಂದೆರಡು ಹಾಡು ಗಮನಿಸಬಹುದು.

ಚಂಡುಹೂವಕ್ಕ ಗಲ್ಲಿಗಲ್ಲಿ ತಿರುಗಿದೆ
ಚಂಡು ಹೂವಾ ಸಿಗಲಿಲ್ಲ ಗೌರಿ ಗಾಬರ್‍ಯಾಗಾಳ

ಕಾರಾಳಹೂವಕ್ಕ ಗಲ್ಲಿ ಗಲ್ಲಿ ತಿರುಗಿದೆ
ಕಾರಾಳ ಹೂವಾ ಸಿಗಲಿಲ್ಲ ಗೌರಿ ಗಾಬರ್ಯಾಗಾಳ

ಕುಕ್ಕೆ ಹೂವಕ್ಕ ಗಲ್ಲಿಗಲ್ಲಿ ತಿರುಗಿದೆ
ಕುಕ್ಕೆ ಹೂವಾ ಸಿಗಲಿಲ್ಲ ಗೌರಿ ಗಾಬರ್ಯಾಗಾಳ

ಕಣಗಿಲ್ಲ ಹೂವಕ್ಕ ಗಲ್ಲಿ ಗಲ್ಲಿ ತಿರುಗಿದೆ
ಕಣಗಿಲ ಹೂವಾ ಸಿಗಲಿಲ್ಲ ಗೌರಿ ಗಾಬರ್ಯಾಗಾಳ

ಕನಕಂಬ್ರಿ ಹೂವಕ್ಕ ಗಲ್ಲಿ ಗಲ್ಲಿ ತಿರುಗಿದೆ
ಕನಕಂಬ್ರಿ ಹೂವಾ ಸಿಗಲಿಲ್ಲ ಗೌರಿ ಗಾಬರ್ಯಾಗಾಳ

ಈ ಮೇಲಿನ ಹಾಡಿನಲ್ಲಿ ಶೀಗವ್ವನ ಪೂಜೆಗಾಗಿ ಅವಶ್ಯವಿದ್ದ ಹೂಗಳು ಇರದ ಕಾರಣ, ಆ ಹೂಗಳನ್ನು ತರಲು ಗಲ್ಲಿಗಲ್ಲಿಯಲ್ಲಿ ಸುತ್ತಾಡಿ ಶ್ರಮಪಟ್ಟಿದ್ದನ್ನು ಇಲ್ಲಿ ಹೆಂಗಳೆ ಹೇಳಿಕೊಳ್ಳುತ್ತಾಳೆ. ಶೀಗವ್ವನಿಗೆ ಜನಪದರು ಸಾಮಾನ್ಯವಾಗಿ ಏರಿಸುವ ಚಂಡುಹೂ, ಕಾರಾಳಹೂ, ಕುಕ್ಕೆಹೂ, ಕಣಗಿಲಹೂ, ಕನಕಂಬ್ರಿ ಹೂಗಳನ್ನು ತರಲು ತಾನು ಗಲ್ಲಿಗಲ್ಲಿ ತಿರುಗಿದ್ದಾಗಿ, ಮತ್ತು ಅವು ಸಿಗದೇ ಹೋದಾಗ ಗೌರಿ ಗಾಬರಿಯಾದಳೆಂದು ಹೇಳುತ್ತ ತನ್ನ ಭಾವನೆಯನ್ನು ಹೊರಗೆಡಹಿದ್ದಾಳೆ.

ಕುಕ್ಕೆ ಹೂವಾ ಕಡ ತಂದೇನ
ಗೌರಿ ನಿನಗ ಕುಳ್ಳಿರಿಸಾಕ
ಕಾರಾಳ ಹೂವಾ ಕಡ ತಂದೇನ
ಗೌರಿ ನಿನಗ ಹೆರಳ ಹಾಕಾಕ
ಹೀರೆ ಹೂವಾ ಕಡ ತಂದೇನ
ಗೌರಿ ನಿನಗ ಸೀರೆ ಉಡಸಾಕ

ಈ ಮೇಲಿನ ಹಾಡಿನಲ್ಲಿ ಶೀಗಿ ಆಚರಿಸುವ ಮಹಿಳೆ ತನ್ನಲ್ಲಿ ಹೂವು ಇರದಿದ್ದರೂ ಬೇರೆಯವರ ಬಳಿಯಲ್ಲಿ ವಿವಿಧ ರೀತಿಯ ಹೂವುಗಳನ್ನು ಕಡ ತಂದು ಶೀಗವ್ವನ ಪೂಜೆಗೆ. ಅರ್ಪಿಸುತ್ತೇನೆ ಎಂದು ಹೇಳಿಕೊಳ್ಳುತ್ತಾಳೆ. ಅಲ್ಲದೆ ಯಾವ ಯಾವ ಬಗೆಯ ಹೂಗಳನ್ನು ಯಾತಕ್ಕಾಗಿ ತಂದಿರುವೆನು ಎಂತಲೂ ಹೇಳಿಕೊಳ್ಳುತ್ತಾಳೆ.

ಒಂದ ಪಾವಟುನಿಗಿ ಹತ್ತುತ
ಒಂದ ಹೂವಾ ಚೆಲ್ಲುತ
ಕೋಲಗೌರಿ ಕೋಲ
ಕಂಚಿನ ಗೌರಿ ಕೋಲ

ಎರಡ ಪಾವಟುನಿಗಿ ಹತ್ತುತ
ಎರಡ ಹೂವಾ ಚಲ್ಲುತ
ಕೋಲಗೌರಿ ಕೋಲ
ಕಂಚಿನ ಗೌರಿ ಕೋಲ

ಈ ಮೇಲಿನ ಹಾಡಿನಲ್ಲಿ ಶೀಗವ್ವನ ಸನ್ನಿಧಿಯ ಎಲ್ಲ ಮೆಟ್ಟಿಲುಗಳನ್ನು ಹೂಗಳಿಂದ ಅಲಂಕರಿಸುವ ಬಗ್ಗೆ ಹೇಳುತ್ತಾಳೆ. ಒಂದು ಮೆಟ್ಟಿಲನ್ನು ಏರಿ ಒಂದು ಹೂವನ್ನು ಹಾಕುವೆ. ಎರಡನೆಯ ಮೆಟ್ಟಿಲು ಹತ್ತಿ ಎರಡು ಹೂಗಳನ್ನು ಹಾಕುವೆ ಎಂದು ಹೇಳುತ್ತಾಳೆ. ಹೀಗೆ ಐದು ಮೆಟ್ಟಿಲುವರೆಗೂ ಹಾಡುತ್ತಾರೆ.

ಒಂದ ಮೂಲ್ಯಾಗ ಒಂದಪತ್ರಿ
ಪತ್ರೆಲ್ಲ ಪನಿವಾರ
ನಮ್ಮ ಶೀಗವ್ವಗ ಮುತ್ತಿನ ಕಂಠಹಾರ
ಮುತ್ತಿನಂತ ಮೂರಬುಗುಡಿ
ತಂದಾನವ್ವ ಸ್ವಾದರ ಮಾವ ದಂಡಿಕುಬಸ

ಎರಡ ಮೂಲ್ಯಾಗ ಎರಡ ಪತ್ರಿ
ಪತ್ರೆಲ್ಲ ಪನಿವಾರ
ನಮ್ಮ ಶೀಗವ್ವಗ ಮುತ್ತಿನ ಕಂಠಹಾರ
ಮುತ್ತಿನಂತ ಮೂರ ಬುಗುಡಿ
ತಂದಾನವ್ವ ಸ್ವಾದರ ಮಾವ ದಂಡಿಕುಬಸ

ಶೀಗವ್ವನಿಗೆ ಪತ್ರಿ ಅರ್ಪಿಸುವ ಈ ಹಾಡಿನಲ್ಲಿ ಆ ಪತ್ರಿಯು ಎಷ್ಟು ಪವಿತ್ರ ಎಂಬುದನ್ನು ಮಹಿಳೆ ಹೇಳುತ್ತಾಳೆ. ಶೀಗವ್ವನಿಗೆ ಅರ್ಪಿಸುವ ಪತ್ರಿಯು ಬರೀ ಸಸ್ಯದ ಎಲೆಯಲ್ಲ ಅದು ಶೀಗವ್ವನ ಸನ್ನಿಧಿಯಲ್ಲಿ ಪನಿವಾರ ಎಂದರೆ ಪ್ರಸಾದದ ಸ್ವರೂಪ ತಾಳುತ್ತದೆ ಎಂದು ನಂಬುತ್ತಾಳೆ. ಒಂದೊಂದು ಮೂಲೆಗೂ ಪತ್ರಿಯನ್ನು ಹಾಕುತ್ತ ಈ ಹಾಡನ್ನು ಐದು ಸಂಖ್ಯೆಯ ವರೆಗೂ ಹಾಡುತ್ತಾರೆ. ಇದಲ್ಲದೇ ತಾನು ಅರ್ಪಿಸಿದ ಈ ಪತ್ರಿಯು ಶೀಗವ್ವನಿಗೆ ಮುತ್ತಿನ ಕಂಠಹಾರವಾಗಿ, ಮುತ್ತಿನ ಬುಗುಡಿಯಾಗಿ, ಸೋದರಮಾವ ತಂದುಕೊಟ್ಟ ದಂಡಿ ಕುಬಸವಾಗಿ ಕಂಡುಬರುತ್ತದೆ ಎಂದು ಹೇಳಿಕೊಳ್ಳುತ್ತಾಳೆ.

## ಶೀಗಿ ಚಿತ್ರಬರೆಯುವ ಹಾಡುಗಳು

ಶೀಗವ್ವನ ಪೂಜೆ, ಆರತಿ ಬೆಳಗುವುದು, ಹೂವು ಪತ್ರಿಗಳನ್ನು ಅರ್ಪಿಸುವ ಸಂದರ್ಭ ಗಳಲ್ಲಿ ಸಂಬಂಧಿಸಿದ ಹಾಡುಗಳನ್ನು ಹಾಡುವಂತೆಯೇ ಶೀಗಿ ಆಚರಣೆಯ ಚಿತ್ರ ಬರೆಯುವ

ಸಂದರ್ಭದಲ್ಲಿಯೂ ವಿವಿಧ ತೆರನಾದ ಹಾಡು ಹಾಡುತ್ತಾರೆ. ಸೂರ್ಯ ಚಂದ್ರರನ್ನು ಬರೆಯುವಾಗ, ಮಂಡಲ ವಿನ್ಯಾಸ ಬರೆಯುವಾಗ, ಗಂಗೆ ಗೌರಿ ಚಿತ್ರ ಬರೆ ಯುವಾಗ, ಏಳು ಸುತ್ತಿನ ಕೋಟೆಯ ಚಿತ್ರ ಬಿಡಿಸುವಾಗ ಹೀಗೆ ಪ್ರತಿಯೊಂದು ಚಿತ್ರ ರಚಿಸುವಾಗಲೂ ಅದಕ್ಕೆ ಸಂಬಂಧಿಸಿದ ಹಾಡುಗಳನ್ನೇ ಹಾಡುತ್ತಾರೆ. ಅವುಗಳಲ್ಲಿ ಒಂದೆರಡು ಗಮನಿಸ ಬಹುದು.

ಗೌರಿ ಗೌರೆಂತಾ ಚಿತ್ರದ ಗೊಂಬೆಂತಾ
ಕೈಲಾಸದಾಗ ಕಸ್ತೂರ್‍ಯಾಗ
ನೀಲಕಂಠ ಮಡದಿ ಬರಲಿಲ್ಲ
ಊರತುಂಬ ಗಾಳಿ
ಶೀಗವ್ವನ ಕೊಳ್ಳಾಗ ತಾಳಿ

ಈ ಮೇಲಿನ ಹಾಡನ್ನು ಚಿತ್ರ ಬರೆಯಲು ತೊಡಗುವಾಗ ಮೊದಲಿಗೆ ಹಾಡುತ್ತಾರೆ. ಗೌರಿ ಅಥವಾ ಶೀಗವ್ವ ಇವರು ಚಿತ್ರದ ಗೊಂಬೆಯ ಹಾಗೆ ಸುಂದರವಾಗಿರುವುದು ಮಾತ್ರ ವಲ್ಲ, ಇವರ ಚಿತ್ರವನ್ನು ಬರೆಯುತ್ತೇನೆ ಎಂದು ಮಹಿಳೆ ಇಲ್ಲಿ ಹೇಳುತ್ತಾಳೆ ಮತ್ತು ಶೀಗಿ ಆಚರಣೆ ಇಡೀ ಸ್ವರೂಪವನ್ನೆ ಇಲ್ಲಿ ಚಿತ್ರದ ಗೊಂಬೆಯ ಮೂಲಕ ಬಿಡಿಸಿ ಗೌರಿ, ಶೀಗವ್ವ, ಕೈಲಾಸ, ನೀಲಕಂಠಶಿವ, ಆತನ ಮಡದಿ ಮತ್ತು ಅವರ ಮದುವೆ ಸನ್ನಿವೇಶವನ್ನು ಚಿತ್ರಿಸುತ್ತೇನೆ ಎಂಬುದಾಗಿ ಹಾಡುತ್ತಾಳೆ.

ಒಂದ ಸೇರಕ್ಕಿ ತಂದೇನ ಗೌರಿ
ಒಂದ ಮಂಡಲ ಬರದೇನ ಗೌರಿ
ಎರಡ ಸೇರಕ್ಕಿ ತಂದೇನ ಗೌರಿ
ಎರಡ ಮಂಡಲ ಬರದೇನ ಗೌರಿ

ಈ ಹಾಡು ಶೀಗಿ ಚಿತ್ರ ರಚನೆಯಲ್ಲಿ ಬರೆಯುವ ಮಂಡಲಗಳ ಕುರಿತಾಗಿದೆ. ಒಂದೊಂದು ಸೇರು ಅಕ್ಕಿಯನ್ನು ತಂದು ಮಂಡಲ ಬರೆಯುವುದಾಗಿದೆ. ಇದೇ ರೀತಿ ಒಂದರಿಂದ ಐದು ಸಂಖ್ಯೆಯವರೆಗೆ ಹಾಡನ್ನು ಮುಂದುವರೆಸುತ್ತಾರೆ.

ಚಂದಪ್ಪ ಚಂದಪ್ಪ ಚಲುವಾ
ಚುಂಗ ಬಿಟಗೊಂಡ ಬರುವಾ
ಹದಿನಾರು ಎತ್ತಿನ ಬಂಡಿ
ಬಂಡಿಮ್ಯಾಲೆ ನಾನು
ನನ್ನ ಹಿಂದ ನವಿಲು
ನವಿಲ ಪುಕ್ಕಾ ತೆರೆದು

ಚಿಗರಿ ಕೊಂಬಿಗೆ ಹಾಕಿ
ಚಿಗರಿ ಚಿಗರಿ ಚಿಕ್ಕಪ್ಪ
ಅವರಿ ಕಾಳ ಮುಕ್ಕಪ್ಪ

ಮೇಲಿನ ಹಾಡು ಚಂದಿರನ ಚಿತ್ರ ಬರೆಯುವಾಗ ಹೇಳುತ್ತಾರೆ. ಇಲ್ಲಿ ಚಂದಿರನ ರೂಪು ಬಲುಸುಂದರ. ಆತನ ಠೀವಿ ಬಲುಸೊಗಸು. ಆತ ಹದಿನಾರು ಎತ್ತುಗಳನ್ನು ಹೂಡಿದ ಬಂಡಿಯ ಮೇಲೆ ಪ್ರಯಾಣಿಸುತ್ತಾನೆ. ಆತನ ಸ್ವರೂಪ ನವಿಲು ಗರಿಗೆದರಿ ಕುಣಿದಂತೆ ಆಕರ್ಷಕ ವಾಗಿರುತ್ತದೆ. ಆತನ ಮೇಲೆ ಕಂಡುಬರುವ ಚಿಗರಿಯ ವಿನ್ಯಾಸ ಮುಂತಾದ ವಿಷಯಗಳನ್ನು ಹೊಗಳುತ್ತ ಚಂದಿರನ ಚಿತ್ರ ಬರೆಯುತ್ತಾರೆ. ಈ ಹಾಡಿನಲ್ಲಿ ಆಧ್ಯಾತ್ಮದ ಹಿನ್ನೆಲೆಯೂ ಅಡಕವಾಗಿದೆ.

ಇದೇ ರೀತಿಯಲ್ಲಿ ಚಂದಿರನ ಕುರಿತು ಅನೇಕ ಹಾಡುಗಳನ್ನು ಹಾಡುತ್ತಾರೆ. ಹಾಗೇ ಸೂರ್ಯನ ಚಿತ್ರ ಬರೆಯುವಾಗ ಆತನ ಬಗ್ಗೆ ಇರುವ ಹಾಡುಗಳನ್ನು ಹಾಡುತ್ತಾರೆ.

ಸೇದು ಭಾವಿ ಸೆಟಗಾರ ಭಾವಿ
ನಮ್ಮಪ್ಪ ಕಟ್ಟಿಸ್ಯಾನ ಮುತ್ತಿನ ಭಾವಿ
ಬರಿಲೊಬ್ಯಾಡೋ
ಅಳ್ಳುಮಳ್ಳು ಡುಮಕ್

ಮೇಲಿನ ಈ ಹಾಡು ಭಾವಿಯ ಚಿತ್ರವನ್ನು ಬರೆಯುವಾಗ ಹಾಡುತ್ತಾರೆ. ಇಲ್ಲಿ ಮಹಿಳೆಯು ತಾನು ಚಿತ್ರ ಬರೆಯುವ ಭಾವಿಯ ಸ್ವರೂಪ ಹೇಗಿರುತ್ತದೆ ಎಂಬುದನ್ನು ತಿಳಿಸುತ್ತ ಅಂತಹ ಭಾವಿಯ ಚಿತ್ರವನ್ನು ನಾನು ಬರೆಯಲೆ ಎಂದು ಗೆಳತಿಯರನ್ನು ಕೇಳುತ್ತಾಳೆ. ಹೀಗೆ ಭಾವಿ ಮತ್ತು ನೀರಿಗೆ ಸಂಬಂಧಿಸಿದ ಹಲವಾರು ಹಾಡುಗಳನ್ನು ಹಾಡುತ್ತಾರೆ.

ಗಂಗಿನ ತರಬೇಕಂತ ನಂದಿನ ಸಿಂಗಾರ ಮಾಡಿ
ಕೊಂಬಣಸ ಕೊರಳ ಹುಲಗೆಜ್ಜಿ । ಕೋಲ
ಕೊಂಬಣಸ ಕೊರಳ ಹುಲಗೆಜ್ಜಿ ಶಿವರಾಯಾ ॥
ಗಂಗೀನ ತರಲು ನಡದಾರ । ಕೋಲ
ಗೊಬ್ಬೂರ ಹಾದೀಲಿ ಒಬ್ಬಯ್ಯ ಬರತಾನ
ಅಬ್ಬರದಿ ಗೌರಿ ಎಡಿಮಾಡಿ । ಕೋಲ
ಒಂದೆಡಿ ಮಾಡಂದ್ರ ಎರಡೆಡಿ ಮಾಡ್ಯಾಳ
ನಿನಗಿಬ್ಬರೇನ ಪುರುಷರು । ಕೋಲ

ಮೇಲಿನ ಈ ಹಾಡು ಗಂಗಿ ಗೌರಿಯ ಚಿತ್ರ ಬರೆಯುವಾಗ ಹಾಡುತ್ತಾರೆ. ಗಂಗಿ ಗೌರಿಯ ಕುರಿತಾಗಿ ಅನೇಕ ಬಗೆಯ ಹಾಡುಗಳು ಪ್ರಚಲಿತದಲ್ಲಿವೆ. ಈ ಹಾಡುಗಳು ಗಂಗಿ ಗೌರಿಯರ ಸಂವಾದ ಕುರಿತಾಗಿದ್ದು ಅತ್ಯಂತ ದೊಡ್ಡದಾಗಿದೆ. ಇಲ್ಲಿ ಒಂದೊಂದು ಪಲ್ಲವಿಯನ್ನು ಮಾತ್ರ ಕೊಡಲಾಗಿದೆ.

ಒಂದು ಸುತ್ತಿನ ಕ್ವಾಟಿ
ಅದರಾಗ ಬಂದು ಕುಂತಾನೆ ಬಸವ
ಬಸವಗ ಬಸವನ್ನೀರೆ
ಬಸವನ ಪಾದಕ ಶರಣೆನ್ನಿರೆ ||

ಎರಡ ಸುತ್ತಿನ ಕ್ವಾಟಿ
ಅದರಾಗ ಎರಡು ಚಂದದ ಬಸವ
ಬಸವಗ ಬಸವನ್ನೀರೆ
ಬಸವನ ಪಾದಕ ಶರಣೆನ್ನಿರೆ ||

ಏಳು ಸುತ್ತಿನ ಕ್ವಾಟಿ
ಅದರಾಗ ಜಗವನಾಳುವ ಬಸವ
ಬಸವಗ ಬಸವನ್ನಿರೆ
ಬಸವನ ಪಾದಕ ಶರಣೆನ್ನಿರೆ ||

ಮೇಲಿನ ಈ ಹಾಡು ಏಳುಸುತ್ತಿನ ಕೋಟೆಯ ಚಿತ್ರ ಬರೆಯುವಾಗ ಹಾಡಲಾಗುತ್ತದೆ. ಈ ಚಿತ್ರದ ಒಂದೊಂದು ಸುತ್ತುಗಳನ್ನು ಬರೆಯುವಾಗಲೂ ಒಂದೊಂದು ನುಡಿಗಳನ್ನು ಹಾಡುತ್ತಾರೆ. ಈ ಪ್ರಕಾರ ಪ್ರತಿಯೊಂದು ಚಿತ್ರಗಳನ್ನು ಬರೆಯುವಾಗಲೂ ಸಂಬಂಧಿಸಿದ ಹಾಡನ್ನು ಹಾಡುವುದು ಕಂಡುಬರುತ್ತದೆ.

**ಶೀಗಿ ಆಟದ ಹಾಡುಗಳು :** ಶೀಗಿ ಹುಣ್ಣಿಮೆಯು ಮಹಿಳೆಯರ ಸಂಭ್ರಮದ ಹಬ್ಬ ವಾಗಿದ್ದು ಹುಣ್ಣಿಮೆಯ ಬೆಳದಿಂಗಳ ರಾತ್ರಿಯಲ್ಲಿ ಹೆಂಗಳೆಯರೆಲ್ಲ ಆಟವಾಡುತ್ತಾರೆ. ಶೀಗಿ ಚಿತ್ರ ಬರೆದು, ಅಲಂಕರಿಸಿ, ಪೂಜೆಮಾಡಿ, ಊಟಮಾಡಿದ ನಂತರ ಬೆಳದಿಂಗಳ ರಾತ್ರಿ ಆಟಕ್ಕೆ ತೊಡಗುತ್ತಾರೆ. ಕೆಲವರು ಆಟವಾಡುತ್ತ ಹಾಡು ಹೇಳಿದರೆ, ಮತ್ತೆ ಕೆಲವರು ಹಾಡಿಗೆ ತಕ್ಕಂತೆ ಕೋಲು ಹಾಕುತ್ತ ಕುಣಿಯುತ್ತಾರೆ. ಈ ಸಂದರ್ಭದಲ್ಲಿ ಹತ್ತು ಹಲವು ಬಗೆಯ ಶೀಗಿ ಹಾಡುಗಳನ್ನು ಹಾಡುತ್ತಾರೆ. ಅವುಗಳಲ್ಲಿ ಒಂದೆರಡು ಹಾಡು ಗಮನಿಸಬಹುದು.

ಒಂದ ಸೇರವ್ವ ಎಣ್ಣಿಯ ತಂದು
ಒಂದ ದೀನವ್ವ ಹೋಳಿಗಿ ಮಾಡಿ
ರಾಯರಾಡೂದು ಹಾದಿಬೀದ್ಯಾಗ
ಸೆಟ್ಟರಾಡೂದು ಪಟ್ಟಣ ಸಾಲ್ಯಾಗ
ನಾವಾಡೂದು ಶೀಗಿ ಹುಣ್ಣಿಮ್ಯಾಗ
ಕೋಲಗೌರಿ ಕೋಲ
ಕಂಚಿನಗೌರಿ ಕೋಲ ॥

ಎರಡ ಸೇರವ್ವ ಎಣ್ಣಿಯ ತಂದು
ಎರಡ ದೀನವ್ವ ಹೋಳಿಗಿ ಮಾಡಿ
ರಾಯರಾಡೂದು ಹಾದಿ ಬೀದ್ಯಾಗ
ಸೆಟ್ಟರಾಡೂದು ಪಟ್ಟಣ ಸಾಲ್ಯಾಗ
ನಾವಾಡೂದು ಶೀಗಿ ಹುಣ್ಣಿಮ್ಯಾಗ
ಕೋಲಗೌರಿ ಕೋಲ
ಕಂಚಿನಗೌರಿ ಕೋಲ ॥

ಈ ರೀತಿಯಲ್ಲಿ ಐದು ಸಂಖ್ಯೆಯವರೆಗೂ ಈ ಹಾಡನ್ನು ಮುಂದುವರಿಸುತ್ತಾರೆ. ಇಲ್ಲಿ ಮಹಿಳೆಯು ತನ್ನ ಪತಿರಾಯನು ಹಾದಿಬೀದಿಯಲ್ಲಿ ತಿರುಗುವುದನ್ನು ಸೂಚ್ಯವಾಗಿ ಹೇಳುತ್ತಾಳೆ. ಹಾಗೆಯೆ ಸೆಟ್ಟರು ಅಂದರೆ ಉಳ್ಳವರು ಪಟ್ಟದಲ್ಲಿ ತಮ್ಮ ಆಡಂಬರವನ್ನು ತೋರಿಸುತ್ತಾರೆ. ಆದರೆ ನಾವು ಮಾತ್ರ ಶೀಗಿ ಹುಣ್ಣಿಮೆಯಲ್ಲಿ ಆಟವಾಡಿ ಸಂತೋಷ ಪಡುತ್ತೇವೆ ಎಂದು ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಾಳೆ.

ಒಂದ ಹಲ್ಲ ನಿಚ್ಚಣಿಕೆ ಏರ್‍ಯಾಳ ನಮ ಶೀಗವ್ವ
ಏರಿ ನೋಡ್ಯಾಳ ತವರೂರ | ಕೋಲ
ಏರಿ ನೋಡ್ಯಾಳ ತವರೂರ ಹಾದ್ಯಾಗ
ಗಂಡ ಶಿವರಾಯ ಬರಲಿಲ್ಲ | ಕೋಲ
ಎರಡ ಹಲ್ಲ ನಿಚ್ಚಣಿಕೆ ಏರ್‍ಯಾಳ ನಮ ಶೀಗವ್ವ
ಏರಿ ನೋಡ್ಯಾಳ ತವರೂರ | ಕೋಲ
ಏರಿ ನೋಡ್ಯಾಳ ತವರೂರ ಹಾದ್ಯಾಗ
ಗಂಡ ಶಿವರಾಯ ಬರಲಿಲ್ಲ | ಕೋಲ

ಈ ಮೇಲಿನ ಹಾಡಿನಲ್ಲಿ ಶಿವನ ಮಡದಿ ಗೌರಿ (ಶೀಗವ್ವ) ತನ್ನ ತವರು ಮನೆಗೆ ಹೋದ ಪ್ರಸಂಗ ಪ್ರಸ್ತಾಪಗೊಂಡಿದೆ. ತಾನು ತವರು ಮನೆಗೆ ಹೋಗಿ ಅನೇಕ ದಿವಸಗಳು ಕಳೆದರೂ

ಗಂಡನಾದ ಶಿವನು ಇನ್ನೂ ಕರೆಯಲು ಬಾರದಿರುವುದು ಅವಳಿಗೆ ಬೇಸರವನ್ನುಂಟು ಮಾಡಿದೆ. ಗಂಡನ ಸಿಹಿನೆನಪಿನಲ್ಲೆ ಆತ ತನ್ನನ್ನು ಕರೆಯಲು ಇಂದು ಬಂದಾನು ನಾಳೆ ಬಂದಾನು ಎಂದು ದಾರಿ ಕಾಯುತ್ತಲಿರುತ್ತಾಳೆ. ಇಂತಹ ಕಾತರದ ಸಂದರ್ಭದಲ್ಲಿ ಆತನ ಬರವಿಕೆಯನ್ನು ಗಮನಿಸಲು ತವರುಮನೆಯಲ್ಲಿನ ನಿಚ್ಚಣಿಕೆಯ (ಏಣಿ) ಒಂದೊಂದೇ ಹಲ್ಲುಗಳನ್ನು ಹತ್ತುತ್ತ ಗಂಡನ ಬರುವನ್ನು ಕಾಯುತ್ತಿರುತ್ತಾಳೆ. ಕೊನೆಗೆ ಆತ ತವರೂರ ಹಾದಿಯಲ್ಲಿ ಕಾಣಿಸದೇ ಇದ್ದಾಗ ನಿರಾಸೆಗೊಳ್ಳುತ್ತಾಳೆ.

ಈ ಹಾಡನ್ನು ಒಂದರಿಂದ ಹತ್ತು, ಹನ್ನೆರಡು, ಹದಿನಾಲ್ಕು, ಹದಿನಾರು ಮತ್ತು ಹದಿನೆಂಟು ಸಂಖ್ಯೆಯವರೆಗೂ ಮುಂದುವರಿಸುತ್ತಾರೆ.

### ಶೀಗಿ ಕಳಿಸುವ ಹಾಡು

ಶೀಗಿ ಹುಣ್ಣಿಮೆ ಇನ್ನೂ ಏಳು ದಿನಗಳು ಇದ್ದಾಗಲೇ ಹೆಂಗಳೆಯರು ಸಂಭ್ರಮದಿಂದ ಓಡಾಡುತ್ತಿರುತ್ತಾರೆ. ಕುಂಬಾರನ ಮನೆಗೆ ಹೋಗಿ ಶೀಗಿ ಮೂರ್ತಿಯನ್ನು ತರುವುದು, ಶೀಗಿಯನ್ನು ಕುಳ್ಳಿರಿಸುವ ಸ್ಥಳವನ್ನು ಚಿತ್ರ ವಿನ್ಯಾಸಗಳಿಂದ ಅಲಂಕರಿಸುವುದು, ವೈಭವದಿಂದ ಪೂಜಿಸುವುದು ಮುಂತಾದ ಎಲ್ಲ ಕ್ರಿಯೆಗಳನ್ನು ಮಾಡಿ ಸಂಭ್ರಮಿಸಿ ಹುಣ್ಣಿಮೆಯ ದಿನ ರಾತ್ರಿ ಹನ್ನೆರಡು ಗಂಟೆಯ ನಂತರ ಏಳು ದಿನಗಳವರೆಗೆ ಪೂಜಿಸಿ, ಹಾಡಿ, ಕುಣಿದು, ನಲಿದಾಡಿ ಶೀಗಿ ಮೂರ್ತಿಗಳನ್ನು ನದಿ, ಬಾವಿ, ಕೆರೆ ಕಟ್ಟೆಯಂತಹ ನೀರಿರುವ ಸ್ಥಳಕ್ಕೆ ತೆಗೆದುಕೊಂಡು ಹೋಗಿ ವಿಸರ್ಜಿಸಿ ಬರುತ್ತಾರೆ.

ಈ ಸಂದರ್ಭದಲ್ಲಿ ಶೀಗಿಯನ್ನು ಕಳಿಸುವ ಅಥವಾ ಬೀಳ್ಕೊಡುವ ಹಾಡುಗಳನ್ನು ಪ್ರಮುಖವಾಗಿ ಹಾಡುತ್ತಾರೆ. ಅನೇಕ ಬಗೆಯ ಈ ಹಾಡುಗಳಲ್ಲಿ ಒಂದೆರಡು ಹಾಡುಗಳನ್ನು ಗಮನಿಸಬಹುದು.

ಶೀಗಿ ಶೀಗಿ ಮಣ್ಣಿನ ಶೀಗಿ
ಮ್ಯಾಣದ ಶೀಗಿ ಕುಂಕುಮ ಶೀಗಿ
ಅವರಿಯಂತ ಅಣ್ಣನ ಕೋಲ
ತೊಗರಿಯಂತ ತಮ್ಮನ ಕೋಲ
ನಿಲ್ಲ ನಿಲ್ಲ ಗೌರವ್ವ
ನಿಲ್ಲಿಸಿಕೋರ ಶೀಗವ್ವ
ಅರಿಸಿಣ ಪತ್ತಲ ಉಡಿಸೇನ
ಅಗಸಿಮಟ ಕಳಿಸೇನ
ಬರುವ ವರ್ಷಕ ಕರಸೇನ ||

ಮೇಲಿನ ಈ ಹಾಡಿನಲ್ಲಿ ಮಹಿಳೆಯು ತಾನು ತಯಾರಿಸಿದ ವಿವಿಧ ಮಾಧ್ಯಮದ ಶೀಗಿ ಪ್ರತಿಮೆಗಳನ್ನು ಬೀಳ್ಕೊಡುವ ಸಂಭ್ರಮ ತುಂಬಿದೆ. ಅವರಿಯಂತಹ ಅಣ್ಣ ಮತ್ತು ತೊಗರಿಯಂತಹ ತಮ್ಮಂದಿರನ್ನು ನನಗೆ ಮುಂದಿನ ಜನ್ಮದಲ್ಲೂ ದಯಪಾಲಿಸು ಎಂದು ಬೇಡಿಕೊಳ್ಳುತ್ತಾಳೆ.

ಹಾಗೆ ಶೀಗವ್ವನಿಗೆ ಅರಿಸಿಣ ಪತ್ತಲ ಉಡಿಸಿ ಊರ ಅಗಸಿವರೆಗೂ ಕಳುಹಿಸಿ ಬರುತ್ತಾಳೆ. ಜೊತೆಗೆ ಮತ್ತೆ ಮುಂದಿನ ವರ್ಷವೂ ನಮ್ಮ ಮನೆಗೆ ನೀನು ಬರಬೇಕೆಂದು ಶೀಗವ್ವನಲ್ಲಿ ಮನವಿಮಾಡಿಕೊಂಡು ಆಕೆಯನ್ನು ಬೀಳ್ಕೊಡುತ್ತಾಳೆ. ಈ ತೆರನಾದ ಶೀಗವ್ವನನ್ನು ಬೀಳ್ಕೊಡುವ ಅಥವಾ ಕಳುಹಿಸಿ ಕೊಡುವ ಹಲವಾರು ಹಾಡುಗಳಿವೆ.

ಒಟ್ಟು ಶೀಗಿ ಹಾಡುಗಳ ತಾತ್ಪರ್ಯವನ್ನು ಗಮನಿಸಿದರೆ ಮಾನವ ಬದುಕಿನ ಎಲ್ಲ ಮುಖಗಳು ಅಲ್ಲಿ ಪ್ರತಿಫಲನಗೊಂಡಿದ್ದು ಕಂಡುಬರುತ್ತದೆ. ಸಮುದಾಯ ಬದುಕಿನ ಸಂಕೇತಗಳಾಗಿ, ಚಿತ್ರ, ಶಿಲ್ಪ ಮತ್ತು ಸಂಗೀತ ಕಲೆಗಳಂತಹ ಲಲಿತ ಕಲೆಗಳ ವಾಹಕಗಳಾಗಿ ಶೀಗಿ ಹಾಡುಗಳು ಜನಮನದಲ್ಲಿ ನೆಲೆಯೂರಿವೆ.

## ಅಡಿಟಿಪ್ಪಣಿಗಳು

೧. ಡಾ.ಎಸ್.ಸಿ.ಪಾಟೀಲ, ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು, ಪುಟ ೧

೨. ಡಾ.ಎಸ್.ಸಿ.ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪುಟ ೬೪

೩. ಡಾ.ಎಸ್.ಸಿ.ಪಾಟೀಲ, ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು, ಪುಟ ೨೧

೪. ಡಾ.ಎಂ.ಎಂ.ಕಲಬುರ್ಗಿ, ಮಾರ್ಗಸಾಹಿತ್ಯ ಮತ್ತು ಜನಪದ ಸಾಹಿತ್ಯ (ಕರ್ನಾಟಕ ಜನಪದ), ಪುಟ ೧

೫. ಹೆಚ್ಚಿನ ವಿವರಣೆಗೆ ನೋಡಿ : ಡಾ. ಎಸ್.ಸಿ.ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪುಟ ೨೧, ೨೨, ೨೩

೬. ರಾಜೇಂದ್ರ ಯರನಾಳೆ, ಶೀಗಿಹಾಡುಗಳು, ಪುಟ ೨

೭. ಮಂಜುನಾಥ ಬೇವಿನಕಟ್ಟಿ (ಸಂ), ಜಾನಪದ ಕರ್ನಾಟಕ (ಸಂಪುಟ-೨), ಪುಟ ೨೫

೮. ರಾಜೇಂದ್ರ ಯರನಾಳೆ, ಶೀಗಿಹಾಡುಗಳು, ಪುಟ ೯

೯. ಡಾ.ಮಂಜುನಾಥ ಬೇವಿನಕಟ್ಟಿ (ಸಂ), ಜಾನಪದ ಕರ್ನಾಟಕ (ಸಂಪುಟ ೨) ಪುಟ ೨೫

೧೦. ಪಿ.ಆರ್.ತಿಪ್ಪೇಸ್ವಾಮಿ (ಸಂ), ಕಲಾಕೋಶ, ಪುಟ ೩.೨೩

## ಗ್ರಂಥಋಣ

೧. ರಾಜೇಂದ್ರ ಯರನಾಳ (ಸಂ), ಶೀಗಿ ಹಾಡುಗಳು, ಶ್ರೀ ಸಿದ್ಧಲಿಂಗೇಶ್ವರ ಸಾಹಿತ್ಯ ಭಂಡಾರ ವಿರಕ್ತಮಠ, ಕುಶನೂರು (ಠಾಣಾ), ೧೯೯೪

೨. ಡಾ.ಬಿ.ಎಸ್.ಗದ್ದಗೀಮಠ, ಕನ್ನಡ ಜನಪದ ಗೀತೆಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮

೩. ಎ.ವ್ಹಿ.ಪಾಟೀಲ, ಉತ್ತರ ಕರ್ನಾಟಕದ ಜನಪದಕಲೆ ಮತ್ತು ವಿಧಿಕ್ರಿಯೆ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಪ್ರಬಂಧ, ೧೯೮೧

೪. ಡಾ.ಎಸ್.ಸಿ.ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೩

೫. ಡಾ.ಎಸ್.ಸಿ.ಪಾಟೀಲ, ಆಚರಣೆಯಲ್ಲಿ ಜನಪದ ವಾಸ್ತುಶಿಲ್ಪಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಮಂಜುನಾಥ ಬೇವಿನಕಟ್ಟಿ (ಸಂ), ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಪಿ.ಆರ್.ತಿಪ್ಪೇಸ್ವಾಮಿ (ಸಂ), ಕಲಾಕೋಶ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೮. ಆರ್.ಎ.ಶಾಂತರಾಜ್, ಕಲೆಗಳಲ್ಲಿ ಸಂಸ್ಕೃತಿ ಹಾಗೂ ಪರಂಪರೆ, ಸ್ಪಂದನ ಚಿತ್ರಕಲಾವಿದರ ಬಳಗ, ಬೆಂಗಳೂರು

೯. ಡಿ.ಕೆ.ರಾಜೇಂದ್ರ, ನಮ್ಮ ಸುತ್ತಿನ ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೦. ಹಿರೇಮಲ್ಲೂರು ಈಶ್ವರನ್, ಭಾರತದ ಹಳ್ಳಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೧. ಡಾ.ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ: ಕನ್ನಡ ವಿ.ವಿ. ಹಂಪಿಗೆ ಸಲ್ಲಿಸಿದ ಪಿಹೆಚ್.ಡಿ. ಮಹಾಪ್ರಬಂಧ - ೨೦೦೧



ಡಾ.ಯಾದಪ್ಪ ಬ.ಪರದೇಶಿ ಬಾದಾಮಿ ತಾಲೂಕಿನ ಕೆರೂರು ಎಂಬ ಗ್ರಾಮದಲ್ಲಿ ೧೯೬೩ರಲ್ಲಿ ಜನಿಸಿದರು. ತಂದೆ ವೃತ್ತಿ ರಂಗಭೂಮಿ ಕಲಾವಿದ. ಮಗ ಚಿತ್ರಕಲಾವಿದ. ಗದಗ ವಿಜಯ ಕಲಾಮಂದಿರದಿಂದ ಬಿ.ಎಫ್.ಎ. ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಎಮ್.ಎ. ಇನ್ ಫೈನ್ ಆರ್ಟ್ ಸ್ನಾತಕೋತ್ತರ ಪದವಿಯನ್ನು ಮತ್ತು ಡಾ.ಎಸ್.ಸಿ. ಪಾಟೀಲರವರ ಮಾರ್ಗದರ್ಶನದಲ್ಲಿ 'ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ' ಎಂಬ ವಿಷಯದ ಮೇಲೆ ಅಧ್ಯಯನ ಮಾಡಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಕಲಾ ಸಾಹಿತ್ಯದಲ್ಲಿ ಬರಹಗಾರರಾಗಿ, ಸಂಶೋಧಕರಾಗಿ, ಗಮನಾರ್ಹರಾಗಿ ಗುರುತಿಸಿಕೊಳ್ಳುತ್ತಿರುವ ಇವರು ಅನೇಕ ಸಂಶೋಧನಾತ್ಮಕ ಸಂಪ್ರಬಂಧಗಳನ್ನು ವಿಚಾರ ಸಂಕಿರಣಗಳಲ್ಲಿ ಮಂಡನೆ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಸದಸ್ಯರಾಗಿ ಕೆಲಸ ಮಾಡುತ್ತಿರುವ ಡಾ. ಯಾದಪ್ಪ ಪರದೇಶಿಯವರು ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಚಿತ್ರಕಲೆಯ ಕುರಿತಾದ ಲೇಖನಗಳ ಸಂಗ್ರಹ 'ಕಲಾ ಸಂಕಲನ' ಪ್ರಕಟಣೆಯಲ್ಲಿದೆ. ಅಕಾಡೆಮಿಗಾಗಿ 'ಶೀಗಿ ಚಿತ್ರಕಲೆ' ಯನ್ನು ಕುರಿತು ಸಂಶೋಧನಾತ್ಮಕವಾಗಿ ಈ ಪುಸ್ತಕವನ್ನು ಬರೆದುಕೊಟ್ಟಿದ್ದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002